

ಪ್ರೊ. ಟಿ.ಕೆ.ರಾಜೇಂದ್ರ

ಎಂ.ಬಿ. ಸುರೇಶ್

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೫೯

ಡಿ.ಕೆ.ರಾಜೇಂದ್ರ

ವ್ಯಕ್ತಿ ಪರಿಚಯ

ಎಂ.ಬಿ.ಸುರೇಶ

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦ ೦೫೪

Dr. D.K.Rajendra - A pen Portrait by **M.B.Suresh,**
Published by **Karnataka Janapada Parishat,** #1, Jaladarshini Layout, Near M.S. Ramaiah Hospital Main Gate, New BEL Road, Bangalore - 560 054, Phone: 080-23605033.
Janapada Loka: 27201143

Pages: 40 Price: Rs.15/- Year: 2011

ಪ್ರಥಮ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : ೪೦
ಬೆಲೆ : ರೂ.೧೫/- (ಹದಿನೈದು ರೂಪಾಯಿಗಳು)

ಮುದ್ರಕರು: 'ವರ್ಣ ಸಲ್ಯೂಷನ್ಸ್', ನಂ.15/1ಬಿ, "ಲಕ್ಷ್ಮಿನಿವಾಸ",
14ನೇ ಅಡ್ಡರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10,
ದೂ. 080-42123547/48, E-mail: vernasolutions@gmail.com

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಶ್ರೀ ಎಂ.ಬಿ.ಸುರೇಶ್** ಅವರು **'ಡಿ.ಕೆ.ರಾಜೇಂದ್ರ – ವ್ಯಕ್ತಿ ಪರಿಚಯ'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧.೦೨.೨೦೧೧

ಜಿ.ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಡಾ.ಡಿ.ಕೆ.ರಾಜೇಂದ್ರ

ಈ ನಾಡಿಗೆ ಶ್ರೇಷ್ಠ ಸಾಹಿತಿಗಳನ್ನು ನೀಡಿದ ಹೆಗ್ಗಳಿಕೆ, ಕಲೆಗಳ ತೌರೂರು, ಕವಿ–ಕಲಾವಿದರ ನೆಲೆವೀಡು, ಗಂಡುಮೆಟ್ಟಿದ ನಾಡು, ಕಲ್ಪವೃಕ್ಷಗಳ ಬೀಡು ಎಂದೇ ಪ್ರಸಿದ್ಧಿಯಾದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಂಡಿನಶಿವರದಲ್ಲಿ ೧೩–೦೪–೧೯೪೨ರಲ್ಲಿ ಡಾ.ರಾಜೇಂದ್ರ ಜನಿಸಿದರು. ತಂದೆಯ ಹೆಸರು ಕೆಂಪಲಿಂಗೇಗೌಡ. ತಾಯಿ ಗೌರಮ್ಮ. ಇವರ ಪೂರ್ಣ ಹೆಸರು 'ದಂಡಿನಶಿವರ ಕೆಂಪಲಿಂಗೇಗೌಡ ರಾಜೇಂದ್ರ' ಎಂದು. ಅವರದು ಊರಿನಲ್ಲಿ ಪ್ರತಿಷ್ಟಿತ ಪಟೇಲರ ಮನೆತನವಾಗಿತ್ತು. ತಂದೆ ಸರಕಾರಿ ಉದ್ಯೋಗದಲ್ಲಿದ್ದರು. ಡಿ.ಕೆ.ಆರ್.ಎಂದೇ ಪ್ರಸಿದ್ಧರಾದ ಇವರಿಗೆ ಐದು ಜನ ಅಕ್ಕಂದಿರು. ಇಬ್ಬರು ಅಣ್ಣಂದಿರು. ಇವರು ಕೊನೆಯ ಎಂಟನೆಯವರು. ಇವರದು ತುಂಬು ಕುಟುಂಬ. ಏಳು ವರ್ಷದ ಹುಡುಗನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡು ಕಂಗಾಲಾದರು. ಆಗ ಅವರ ನೆರವಿಗೆ ಬಂದವರು ಸಹಾಯಕ ಕಮಿಷನರ್ ಆಗಿ ನಿವೃತ್ತರಾಗಿದ್ದ ತಮ್ಮ ಹಿರಿಯಕ್ಕನ ಯಜಮಾನರಾದ ಹೆಚ್.ಬೊಮ್ಮಯ್ಯನವರು. ಡಿ.ಕೆ.ಆರ್. ಅವರ ಪಾಲಿಗೆ ದೊಡ್ಡ ಭಾವ ಮಾತ್ರ ಆಗಿರಲಿಲ್ಲ. ಅವರ ಭವಿಷ್ಯದ ರೂವಾರಿಯೂ ಆದರು.

ಡಿ.ಕೆ.ರಾಜೇಂದ್ರ ಅವರು ತಮ್ಮ ಹುಟ್ಟೂರಾದ ದಂಡಿನಶಿವರದಲ್ಲಿಯೇ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿ ನಂತರ ಅರಕಲಗೂಡು ಮತ್ತು ಶಿರಾದಲ್ಲಿ ಪ್ರೌಢಶಾಲೆಯ ಶಿಕ್ಷಣ

ಮುಂದುವರಿಸಿದರು. ಹಾಸನದ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು ಹಾಸನ ತಾಲ್ಲೂಕು ದುದ್ದದ ಪ್ರೌಢಶಾಲೆಯಲ್ಲಿ ಒಂದು ವರ್ಷ ಕಾಲ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನಂತರ ಮೈಸೂರಿಗೆ ಬಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ.ಗೆ ಸೇರಿ ೧೯೬೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ಅದೇ ವರ್ಷ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರಾಗಿ ಸೇರಿಕೊಂಡ ಇವರು ಒಂದೊಂದೇ ಮೆಟ್ಟಿಲನ್ನು ಏರುತ್ತಾ. ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗುರುತರವಾದ ಜವಾಬ್ದಾರಿಗಳನ್ನು ನಿರ್ವಹಿಸಿದ್ದಲ್ಲದೆ, ನಿವೃತ್ತಿಯಾದ ನಂತರವೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶೇಷ ಯೋಜನೆಯಡಿಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ವಿಷಯ ವಿಶ್ವಕೋಶಕ್ಕೆ ಸಂಬಂಧಿಸಿದಂತೆ 'ಜಾನಪದ' ಸಂಪುಟದ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಡಿ.ಕೆ.ಆರ್.ರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಗೌರವ ನಿರ್ದೇಶಕರಾಗಿ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಸೇವೆ ಸಲ್ಲಿಸುತ್ತಿದ್ದಾರೆ. ವೃತ್ತಿ ಮತ್ತು ಪ್ರವೃತ್ತಿಯಲ್ಲಿ ತಮ್ಮದೇ ಆದ ವಿಶೇಷ ಛಾಪು ಮೂಡಿಸಿರುವ ರಾಜೇಂದ್ರ ಅವರನ್ನು ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಅವುಗಳಲ್ಲಿ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಪುಸ್ತಕ ಬಹುಮಾನ, ಜನದನಿ ಸಾಂಸ್ಕೃತಿಕ ಟ್ರಸ್ಟ್‌ನಿಂದ ರಾಜ್ಯಮಟ್ಟದ ಜೀಶಂಪ ಜಾನಪದ ತಜ್ಞ ಪ್ರಶಸ್ತಿ, ಕುವೆಂಪು ಟ್ರಸ್ಟ್ ಪುಸ್ತಕ ಬಹುಮಾನ, ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನ ಹಾಗೂ ಹಲವಾರು ವಿಚಾರಗೋಷ್ಠಿಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿರುವುದಲ್ಲದೆ, ಹಲವಾರು ಸಂಘ ಸಂಸ್ಥೆಗಳ ಸದಸ್ಯತ್ವ ಪಡೆದ ಹೆಗ್ಗಳಿಕೆ ಇವರದು.

ಡಿ.ಕೆ.ರಾಜೇಂದ್ರ ಅವರಿಗೆ ಉತ್ತಮ ಗುರು ಪರಂಪರೆ ಇತ್ತು. ದೇಜಗೌ, ಹಾಮಾನಾ, ಪರಮೇಶ್ವರಭಟ್ಟ, ಜಿ.ವರದರಾಜರಾವ್, ಎಲ್.ಬಸವರಾಜ್, ಹೆಚ್.ತಿಪ್ಪೇರುದ್ರಸ್ವಾಮಿ, ಸುಜನಾ, ಸಿ.ಪಿ.ಕೆ., ಟಿ.ವಿ.ವಿ, ಜೀಶಂಪ – ಒಬ್ಬೊಬ್ಬರ ವ್ಯಕ್ತಿತ್ವಕ್ಕೂ ರಾಜೇಂದ್ರ ಮಾರು ಹೋಗಿದ್ದರು. ಅವರ ವಿದ್ವತ್ತು ರಾಜೇಂದ್ರರ ಮೇಲೆ ಅಪಾರ ಪ್ರಮಾಣದಲ್ಲಿ ಪ್ರೇರಣೆ, ಪ್ರಭಾವ ಬೀರಿ ಸುಮಾರು ನಲವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಲು ಸಹಕಾರಿಯಾಯಿತು. ಸೌಮ್ಯ ಸ್ವಭಾವ, ಮಿತಭಾಷಿ, ಭಾವಜೀವಿ, ಬದುಕಿನ ಯಾವುದೇ ರಭಸ ಗದ್ದಲಗಳಿಂದ ತೀರಾ ಮುಕ್ತವಾದ ಪ್ರಶಾಂತ ಮನಸ್ಸು ಡಿ.ಕೆ. ಆರ್. ಅವರದ್ದು. ಬೋಧನೆ, ಸಂಶೋಧನೆಗಳಿಂದ ವಿದ್ಯಾರ್ಥಿಗಳು ಮತ್ತು ವಿದ್ವಾಂಸರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಎರಡೂ ಕ್ಷೇತ್ರಗಳಲ್ಲಿ ಪ್ರೌಢಿಮೆ ಮತ್ತು ವಿದ್ವತ್ತನ್ನು ಗಳಿಸಿರುವ ಡಿ.ಕೆ.ಆರ್. ಅವರ ಮಾರ್ಗದರ್ಶನದಲ್ಲಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉತ್ತಮ ನಿಬಂಧಗಳನ್ನು ರಚಿಸಿರುವುದು ಅವರ ವಿದ್ವತ್ತಿಗೆ ಸಾಕ್ಷಿಯಾಗಿದೆ.

ಡಿ.ಕೆ.ಆರ್. ಅವರ ಸಾಹಿತ್ಯ ವೈವಿಧ್ಯಮಯವಾದುದು. ಅವರು ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಜನಪದ ಸಾಹಿತ್ಯ ಮತ್ತು ಪ್ರಬಂಧ ಪ್ರಕಾರದಲ್ಲಿ ಅವರದು ದೊಡ್ಡ ಹೆಸರು. ಪ್ರಬಂಧ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಜಾನಪದ ವಿಮರ್ಶೆ, ಸಂಪಾದನೆ, ವಿಚಾರ ಸಾಹಿತ್ಯ, ವ್ಯಕ್ತಿ ಚಿತ್ರಣ, ಮಕ್ಕಳ ಸಾಹಿತ್ಯ, ಗ್ರಂಥ ಸಂಪಾದನೆ, ಹೀಗೆ ನಾನಾಮುಖಿಯಾಗಿ ತಮ್ಮ ಬರವಣಿಗೆಯ ಹೆಜ್ಜೆ ಗುರುತುಗಳನ್ನು ಮೂಡಿಸಿರುವುದನ್ನು ಕಾಣಬಹುದು.

ಜಾನಪದ ಕ್ಷೇತ್ರದಲ್ಲಿ ಡಿ.ಕೆ.ಅರ್.ಅವರ ಹೆಸರು ಮುಂಚೂಣಿಯಲ್ಲಿದೆ. ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದ ಅವರಿಗೆ ತಮ್ಮ ಊರಿನ

ಹೊನ್ನಾದೇವಿಯ ಜಾತ್ರೆ, ಅಲ್ಲಿಯ ಜನಪದ ಕಲೆಗಳ ಪ್ರದರ್ಶನ, ವರ್ಷಕ್ಕೊಮ್ಮೆ ನಡೆಯುವ ಬಯಲಾಟಗಳಂತಹ ಮನರಂಜನೆಯ ಕಲೆಗಳು ಬಾಲಕ ರಾಜೇಂದ್ರರ ಮೇಲೆ ಪರಿಣಾಮ ಬೀರಿದ್ದುಂಟು. ಮುಂದೆ ದೇಜಗೌ ಹಾಗೂ ಜೀಶಂಪ ಅವರ ಪ್ರೇರಣೆಯಿಂದ ಎಂ.ಎ.ಪದವಿಯಲ್ಲಿ ಜಾನಪದವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು, ಆಳವಾದ ಅಧ್ಯಯನ, ಅಧ್ಯಾಪನಗಳಲ್ಲಿ ಹಾಗೂ ಕ್ಷೇತ್ರಕಾರ್ಯಗಳಲ್ಲಿ ತೊಡಗಿಸಿಕೊಂಡು ಈ ನಾಡಿನ ಶ್ರೇಷ್ಠ ಜಾನಪದ ವಿದ್ವಾಂಸರೆನಿಸಿಕೊಂಡರು. ಅವರು ಜಾನಪದ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಧ್ಯಯನ ಯೋಗ್ಯವಾಗಿದೆ. ತಾವು ಬೆಳೆದು ಬಂದ ನೆಲದ ಸೊಗಡನ್ನು ತಮ್ಮ ಅಪೂರ್ವ ಗ್ರಹಿಕೆಗಳಿಂದ ಹಿಡಿದಿಟ್ಟುಕೊಂಡು, ಅದನ್ನು ಅಧ್ಯಯನಕ್ಕೆ ಒಗ್ಗಿಸಿಕೊಂಡು ಅದಕ್ಕೊಂದು ವೈಚಾರಿಕ, ವೈಜ್ಞಾನಿಕ, ಆಯಾಮವನ್ನು ತಂದುಕೊಟ್ಟಿದ್ದು ಶ್ಲಾಘನೀಯ. ಈ ನಿಟ್ಟಿನಲ್ಲಿ ಅವರು ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡುವುದರ ಮುಖೇನ ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿ, ಸಮರ್ಥ ವಿದ್ವಾಂಸರಾಗಿ ನಿಲ್ಲುತ್ತಾರೆ. ರಾಜೇಂದ್ರ ಅವರು ಜನಪದ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

ಜನಪದ ವಿಮರ್ಶಾ ಕೃತಿಗಳು:

೧. ಜಾನಪದ ಸಮೀಕ್ಷೆ

೨. ಜಾನಪದ ಸಂಚಯ

೩. ಜಾನಪದ ಸಮಾಲೋಕ

೪. ಜಾನಪದ ಸಮನ್ವಯ

೫. ಮುರಾವು

೬. ಜಾನಪದ : ಕೆಲವು ಗ್ರಹಿಕೆಗಳು

೭. ಜಾನಪದ ಮತ್ತು ಶಿಷ್ಟಪದ

೮. ಕರಪಾಲದವರು

೯. ಜನಪದ ನಂಬಿಕೆಗಳು

ಸಂಪಾದಿತ ಕೃತಿಗಳು:

೧. ಕರಪಾಲಮೇಳ

೨. ಶಿಶುಪ್ರಾಸಗಳು

೩. ನಮ್ಮ ಸುತ್ತಿನ ನಂಬಿಕೆಗಳು

೪. ಬೆದರುಬೊಂಬೆ ಮತ್ತು ಇತರ ಜನಪದ ಕಥೆಗಳು

ಪಿಎಚ್.ಡಿ. ಪ್ರಬಂಧ:

೧. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ.

ಜಾನಪದದ ವಿವಿಧ ಮುಖಗಳನ್ನು ಕುರಿತ ಎಂಟು ಲೇಖನಗಳು **ಜಾನಪದ ಸಮೀಕ್ಷೆ** ಕೃತಿಯಲ್ಲಿವೆ. ಲೇಖಕರೇ ಹೇಳುವ ಹಾಗೆ ಇಲ್ಲಿಯ ಎಲ್ಲಾ ಲೇಖನಗಳು ಜಾನಪದ ಅಭ್ಯಾಸದಿಂದ ಮೂಡಿಬಂದವುಗಳಾಗಿವೆ. ಇದೊಂದು, ಕನ್ನಡ ಜಾನಪದದ ಕೆಲವು ಮುಖಗಳನ್ನು ಪರಿಶೀಲಿಸುವ ಪ್ರಬಂಧ ಸಂಕಲನ. ಇದರಿಂದ ಜನಪದ ಸಾಹಿತ್ಯ, ಸಂಸ್ಕೃತಿ, ಹಾಗೂ ಕಲೆಗಳ ಮಹತ್ವವನ್ನು ಅರಿಯಬಹುದು. 'ಕಳೆದ ಶತಮಾನದ ಸಂಗ್ರಾಹಕರು' ಎಂಬ ಮೊದಲ ಲೇಖನದಲ್ಲಿ ನಮ್ಮ ನಾಡಿನ ಜಾನಪದ ಕ್ಷೇತ್ರದಲ್ಲಿ ಕೈ ಹಾಕಿದ ವ್ಯಕ್ತಿಗಳಲ್ಲಿ ಮೊದಲಿಗರಾದ ಆಂಗ್ಲರ ಕ್ಷೇತ್ರ ಕಾರ್ಯದ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಜಾನಪದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಕಾರ್ಯದ ಮಹತ್ವದ ಬಗ್ಗೆ, ಅದರ ಅನಿವಾರ್ಯತೆಯ ಬಗ್ಗೆ ವಿವೇಚಿಸಿದ ಚಾರ್ಲ್ಸ್ ಇ.ಗೋವರ್ ಕುರಿತ ಪ್ರಸ್ತಾಪವಿದೆ. ಗೋವರ್ ಅವರ ಜಾನಪದ ಕುರಿತ ದೃಷ್ಟಿಯಿಂದ ಕರ್ನಾಟಕದಲ್ಲಿ ಜಾನಪದ ಸಂಗ್ರಹ ಕಾರ್ಯ ಚಟುವಟಿಕೆಯಿಂದ ಕೂಡಿರಲು ಸಾಧ್ಯವಾಯಿತು ಎಂಬುದನ್ನು ಗುರುತಿಸುತ್ತಾರೆ. ಕ್ಷೇತ್ರ

ಕಾರ್ಯಕರ್ತನಿಗೆ ಇರಬೇಕಾದ ನಡೆ ನುಡಿ, ಆಸಕ್ತಿ, ಅನುಸರಿಸುವ ಕ್ರಮ ಇವುಗಳ ಬಗ್ಗೆ ಗೋವರ್‌ನ ವಿಚಾರಗಳನ್ನು ತಿಳಿಸಿದ್ದಾರೆ. ದಾಸರು ಸಂಪ್ರದಾಯಸ್ಥ ಹಾಡುಗಾರರಾದ್ದರಿಂದ, ಅವರ ವೃತ್ತಿ ಭಿಕ್ಷಾಟನೆಯಾಗಿದ್ದುದರಿಂದ ಅವರ ಬಗ್ಗೆ ಮಾಹಿತಿ ಸಂಗ್ರಹಿಸಿ ಅಂದಿನ ಜನಪದ ಹಾಡಿನ ಹಾಗೂ ಜಾನಪದ ಕ್ಷೇತ್ರದ ಸ್ಥಿತಿಗತಿಗಳನ್ನು ಗೋವರ್ ಪರಿಚಯ ಮಾಡಿಕೊಟ್ಟಿರುವ ಅಂಶಗಳನ್ನು ಇಲ್ಲಿ ಕಾಣಬಹುದು.

ಕಾಲದ ದೃಷ್ಟಿಯಿಂದ ಗೋವರ್ ಮೊದಲಿಗರಾದರೆ, ಕಾರ್ಯದ ದೃಷ್ಟಿಯಿಂದ ಜೆ.ಎಫ್.ಫ್ಲೀಟರದು ತುಂಬಾ ಮಹತ್ವವಾದುದು ಎಂಬುದನ್ನು ಲೇಖಕರು ತೋರಿಸಿದ್ದಾರೆ. ಈತ ಕನ್ನಡ ಜಾನಪದ ಸಂಗ್ರಹಕಾರ್ಯಕ್ಕೆ ನಾಂದಿ ಹಾಡಿದ ಆದ್ಯ ಪುರುಷ. ಕ್ರಿ.ಶ.೧೮೮೫ರಲ್ಲಿ ಕನ್ನಡದ ಕೆಲವು ಲಾವಣಿಗಳನ್ನು ಸಂಗ್ರಹಿಸಿ ಅವುಗಳನ್ನು 'Indian Antiquary' ಯಲ್ಲಿ ಪ್ರಕಟಿಸಿ, ಸ್ವಾರಸ್ಯಪೂರ್ಣ ಪರಿಚಯ ಮಾಡಿರುವ ಎಂಟು ಲಾವಣಿಗಳ ಬಗ್ಗೆ ವಿಶ್ಲೇಷಣೆ ಇಲ್ಲಿದೆ. ಈ ಲಾವಣಿಗಳನ್ನು 'ದಾಸರು ಎಂಬ ಒಂದು ಬಗೆಯ ಗಾಯಕರಿಂದ ಸಂಗ್ರಹಿಸಿದೆ' ಎಂಬ ಮಾಹಿತಿಯನ್ನು ಫ್ಲೀಟರೇ ಹೇಳಿಕೊಂಡಿದ್ದಾರೆಂದು ಲೇಖಕರು ಗುರುತಿಸುತ್ತಾರೆ. ಪ್ರತಿಯೊಂದು ಲಾವಣಿಗೂ ಫ್ಲೀಟರು ಹಿನ್ನೆಲೆಯನ್ನು ಕೊಟ್ಟು ಅನಂತರ ಅದರ ಇಂಗ್ಲಿಷ್ ಅನುವಾದ ಕೊಟ್ಟಿರುವುದನ್ನು ತಿಳಿಸಿದ್ದಾರೆ. ಇಲ್ಲಿಯ ಲಾವಣಿಗಳ ವಸ್ತು ಐತಿಹಾಸಿಕ ವಿಷಯಗಳ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಲಾವಣಿಗಳಾಗಿವೆ ಎಂಬುದನ್ನು ಗುರುತಿಸಿ, ಇಂತಹ ಒಂದು ಕಾರ್ಯದಿಂದಾಗಿ ಫ್ಲೀಟ್ ಅವರು ಮೊತ್ತ ಮೊದಲಬಾರಿಗೆ ಕರ್ನಾಟಕ ಜನಪದ ಸಾಹಿತ್ಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಚಯ ಮಾಡಿಕೊಳ್ಳಲು ಕಾರಣವಾಯಿತು ಎಂದು ಪ್ರಶಂಸೆಯ ನುಡಿಗಳಾಡಿರುವುದನ್ನು ಕಾಣಬಹುದು.

ಮತ್ತೊಬ್ಬ ಜಾನಪದ ವಿದ್ವಾಂಸರಾದ ಕಿಟ್ಟೆಲ್‌ರವರನ್ನು ಕುರಿತು,

ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳನ್ನು ಪ್ರಸ್ತಾಪಿಸಿದ್ದಾರೆ. ಕಿಟ್ಟೆಲ್ ಅವರು ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚರಿಸಿ ಅಪಾರ ಸಂಖ್ಯೆಯ ಗಾದೆಗಳನ್ನು ಸಂಗ್ರಹಿಸಿ, ತಮ್ಮ ಅರ್ಥಕೋಶದಲ್ಲಿ ಗ್ರಾಮ್ಯ ಪದಗಳು ಬಂದಾಗ ಅವುಗಳ ಅರ್ಥಸ್ಪಷ್ಟತೆಗಾಗಿ ನಾಲ್ಕು ಸಾವಿರದ ನೂರ ಅರವತ್ತೆಂಟು ಗಾದೆಗಳನ್ನು ಬಳಸಿಕೊಳ್ಳುವುದರ ಮುಖೇನ ಕನ್ನಡ ಜಾನಪದ ಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿರುವುದನ್ನು ಈ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಹತ್ತೊಂಬತ್ತನೇ ಶತಮಾನದಲ್ಲಿ ಈ ಮೂವರು ಪಾಶ್ಚಾತ್ಯ ವಿದ್ವಾಂಸರನ್ನು 'ಕರ್ನಾಟಕದ ಆದ್ಯ ಜಾನಪದ ಸಂಗ್ರಾಹಕರು' ಎಂದು ಉಲ್ಲೇಖಿಸಿರುತ್ತಾರೆ.

ಈ ಕೃತಿಯ ಎರಡನೆಯ ಲೇಖನ 'ಈ ಶತಮಾನದ ಆದ್ಯ ಜಾನಪದ ಸಂಗ್ರಾಹಕರು'ದಲ್ಲಿ ನವೋದಯ ಚಳುವಳಿಯ ಅಂಗವಾಗಿ ನಡೆದ ಜಾನಪದ ಸಂಗ್ರಹಣೆಯಲ್ಲಿ ಭಾಗವಹಿಸಿದ್ದ ಮಾಸ್ತಿ, ಹಲಸಂಗಿ ಚೆನ್ನಮಲ್ಲಪ್ಪ, ರೇವಪ್ಪ, ಲಿಂಗಪ್ಪ, ಅರ್ಚಕ ರಂಗಸ್ವಾಮಿ, ದೇವುಡು ಮುಂತಾದವರ ಪರಿಚಯವಿರುವುದನ್ನು ಕಾಣಬಹುದು. ಮಾಸ್ತಿಯವರು ಕರ್ನಾಟಕದ ನಾನಾಭಾಗಗಳನ್ನು ಸಂದರ್ಶಿಸಿ, ಬಿಡುವಿನ ವೇಳೆಯಲ್ಲಿ ತಾವು ಕಂಡು, ಕೇಳಿ, ಆನಂದಿಸಿದ ಜನಪದ ಸಾಹಿತ್ಯದ ತುಣುಕುಗಳನ್ನು ಸಂಗ್ರಹಿಸಿ, ಲೇಖನಗಳನ್ನು ಬರೆದಿರುವುದನ್ನು ತಿಳಿಸುತ್ತಾರೆ. 'ಕನ್ನಡ ನಾಡಿನ ಲಾವಣಿ ಸಾಂಗತ್ಯ' ಮಾಸ್ತಿಯವರ ಒಂದು ವಿಸ್ತಾರವಾದ ಲೇಖನ ೧೯೧೯ರಲ್ಲಿ ಪ್ರಕಟವಾಯಿತು. 'ಅರ್ಜುನ ಜೋಗಿ'ಯ ಹಾಡನ್ನು ಪೂರ್ತಿಯಾಗಿ ಸಂಗ್ರಹಿಸಿ ಅದರ ಪೂರ್ಣ ಕಲ್ಪನೆ ಬರುವಂತೆ ಲೇಖನದಲ್ಲಿ ನಿರೂಪಿಸಿದ್ದಾರೆ. ಕೋಲಾಟಕ್ಕೆ ಸಂಬಂಧಿಸಿದ ಹಾಡುಗಳು, ಹಾಸ್ಯದ ಹಾಡುಗಳು, ಮಲೆನಾಡಿನ ಹಾಡುಗಳ ಬಗೆಗಳು, ಅನೇಕ ನಂಬಿಕೆಗಳು ಹಾಗೂ ಆಟಗಳನ್ನು ಕುರಿತು ಪ್ರಸ್ತಾಪಿಸಿರುವ ವಿಚಾರಗಳನ್ನು ತಿಳಿಸಿದ್ದಾರೆ. ಜನಪದ ಗೀತೆಗಳ ವೈವಿಧ್ಯವನ್ನು, ಅದರ ಸೊಬಗನ್ನು ಕುರಿತ 'ಕರ್ನಾಟಕ ಜನಪದ ಸಾಹಿತ್ಯ'ಎನ್ನುವ

ಕೃತಿ ೧೯೩೦ರಲ್ಲಿ ಪ್ರಕಟವಾಗಿರುವುದನ್ನು ತಿಳಿಸಿ ಅದರ ಮಹತ್ವವನ್ನು ಚರ್ಚಿಸಿದ್ದಾರೆ. ಹಲಸಂಗಿ ಸಹೋದರರಾದ ಚೆನ್ನಮಲ್ಲಪ್ಪ, ರೇವಪ್ಪ, ಲಿಂಗಪ್ಪ ಇವರುಗಳು ೧೯೩೧ರಲ್ಲಿ ಸಮರ್ಪಕವಾಗಿ ಸಂಗ್ರಹಿಸಿದ ಪ್ರಪ್ರಥಮ ಸಂಕಲನವಾದ 'ಗರತಿಯಹಾಡು' ಕೃತಿಯ ಬಗ್ಗೆ ವಿವರವಿಲ್ಲಿದೆ. ೧೯೩೩ರ ವೇಳೆಗೆ ಲಾವಣಿಗಳ ಸಂಗ್ರಹವಾದ 'ಜೀವನ ಸಂಗೀತ' ಕೃತಿಯನ್ನು ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾ ಅವರು ಸೇರಿ ಪ್ರಕಟಿಸಿದರು. ಶ್ರೀ ಬಿ.ಎನ್.ರಂಗಸ್ವಾಮಿಯವರು 'ವಿಶ್ವ ಕರ್ನಾಟಕ' ಪತ್ರಿಕೆಯಲ್ಲಿ ಬೆಳಕುಕಂಡ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ಲೇಖನದಿಂದ ಪ್ರಭಾವಿತರಾಗಿ 'ಹುಟ್ಟಿದ ಹಳ್ಳಿ : ಹಳ್ಳಿಯ ಹಾಡು' ಕೃತಿಯನ್ನು ಸಂಗ್ರಹಿಸಿದರು. ಬೇಂದ್ರೆ, ಗೊರೂರು ಮುಂತಾದವರು ಜಾನಪದ ಕುರಿತ ಸಂಗ್ರಹ ಕಾರ್ಯದಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸಿದ ವಿವರಗಳನ್ನು ಈ ಲೇಖನದಲ್ಲಿ ಸವಿವರವಾಗಿ ಚರ್ಚಿಸಿರುವುದನ್ನು ಕಾಣಬಹುದು.

ಮೂರನೆಯ ಲೇಖನ 'ಕನ್ನಡದಲ್ಲಿ ಜಾನಪದ ಕಲ್ಪನೆ'ಯಲ್ಲಿ ಡಬ್ಲ್ಯೂ.ಜೆ. ಥಾಂಸ್ ಇಂಗ್ಲೆಂಡಿನಲ್ಲಿ ೧೮೪೬ರಲ್ಲಿ 'Folklore' ಎಂಬ ಪದವನ್ನು 'ಅಥೀನಿಯಂ' ಪತ್ರಿಕೆಗೆ ಬರೆದ ಲೇಖನದ ಪ್ರಸ್ತಾಪವಿದೆ. ಮೊದಲಿಗೆ ೧೯೬೬ರ 'Film Festival' ವಿಶೇಷಾಂಕದಲ್ಲಿ 'ಜಾನಪದ' ವ್ಯಾಪ್ತಿಯನ್ನು ಕುರಿತು ಪ್ರಸ್ತಾಪಿಸಿದ ಕೀರ್ತಿ ಜೀಶಂಪ ಅವರಿಗೆ ಸಲ್ಲುತ್ತದೆ ಎಂದು ಗುರುತಿಸುತ್ತಾರೆ. ಎರಡನೆಯ ವಿದ್ವತ್‌ಪೂರ್ಣ ಲೇಖನ ಹಾ.ಮಾ.ನಾ ಅವರದು. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಸಮಾರಂಭಗಳ ಅಂಗವಾಗಿ ನಡೆದ ಲೇಖಕರ ಸಮ್ಮೇಳನದಲ್ಲಿ 'Folklore' ಗೆ ಸಂವಾದಿಯಾಗಿ ಕನ್ನಡದಲ್ಲಿ 'ಜಾನಪದ' ಎಂಬ ಪದ ಬಳಸಬಹುದೆಂದು ಸೂಚಿಸಿರುವುದರ ಚರ್ಚೆಯಿರುವುದನ್ನು ಕಾಣಬಹುದು. ಹಾ.ಮಾ.ನಾ. ಅವರಿಗೆ ಜಾನಪದ ಕುರಿತ ವೈಜ್ಞಾನಿಕ ದೃಷ್ಟಿಕೋನವಿದ್ದರೆ, ದೇಜಗೌ ಅವರು ಈ ಎಲ್ಲಾ

ದೃಷ್ಟಿಗಳೂ ವಿಶಾಲವಾಗಿ ಬೆಳೆದು ಸಾರ್ಥಕತೆಯನ್ನು ಹೊಂದಲು ಅನುಕೂಲವಾದ ಪರಿಸರವನ್ನು ಕಲ್ಪಿಸಿಕೊಡಲು ಶ್ರಮಿಸಿದ್ದಾರೆ ಎಂದು ಹೇಳಿದ್ದಾರೆ.

ನಾಲ್ಕನೆಯ ಲೇಖನವಾದ 'ಯಕ್ಷಗಾನ ಬಯಲಾಟ'ದಲ್ಲಿ 'ಮೂಡಲಪಾಯ' ಹಾಗೂ 'ಪಡುವಲಪಾಯ' ಸಂಪ್ರದಾಯಗಳಲ್ಲಿ ಕಂಡುಬರುವ ಮೂಲಭೂತ ವ್ಯತ್ಯಾಸ ಹಾಗೂ ಮಹತ್ವ ಕುರಿತು ಸುದೀರ್ಘ ಚರ್ಚೆಯಿದೆ. ವಿಶೇಷವಾಗಿ 'ಮೂಡಲಪಾಯ'ದ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಿನ ಯುದ್ಧ ಪ್ರಸಂಗಗಳು, ಗಂಡು-ಹೆಣ್ಣು ಪಾತ್ರಗಳ ಕುಣಿತ, ವೇಷಭೂಷಣಗಳ ಬಗ್ಗೆ ಸುದೀರ್ಘವಾದ ವಿಶ್ಲೇಷಣೆಯು, ಡಿ.ಕೆ.ರಾಜೇಂದ್ರ ಅವರಿಗಿದ್ದ ಜಾನಪದ ಕುರಿತ ಅರಿವಿನ ಮಟ್ಟಕ್ಕೆ ಸಾಕ್ಷಿಯಾಗಿದೆ.

ಜನಪದ ಸಂಸ್ಕೃತಿಯ ಕೆಲವು ಮುಖಗಳನ್ನು ಪರಿಚಯಿಸುವ ಐದನೆಯ ಲೇಖನ 'ಜನಪದ ಗೀತೆಗಳಲ್ಲಿ ಕಂಡು ಬರುವ ಜನಪದ ಸಂಸ್ಕೃತಿ'. ಇದರಲ್ಲಿ ಜನಪದ ಸಂಸ್ಕೃತಿ ಕುರಿತು ಚರ್ಚಿಸುವಾಗ ಅನೇಕ ಜನಪದ ತ್ರಿಪದಿಗಳನ್ನು ಬಳಸಿಕೊಂಡು ಸಂಸ್ಕೃತಿಯ ಅಂಶಗಳನ್ನು ಹುಡುಕುವ ಪ್ರಯತ್ನ ನಡೆಸಿದ್ದಾರೆ. ಅಲ್ಲದೆ ನಂಬಿಕೆ, ನಡವಳಿಕೆ, ಆಚಾರ, ಸಂಪ್ರದಾಯಗಳಿಗೆ ಸಂಬಂಧಿಸಿದ ಆಲೋಚನೆಗಳಿವೆ.

'ಐತಿಹಾಸಿಕ ಕಥನಗೀತೆಗಳಲ್ಲಿ ಯುದ್ಧ ಚಿತ್ರಣ' ಎನ್ನುವ ಆರನೆಯ ಲೇಖನದಲ್ಲಿ ಜನಪದ ಸಾಹಿತ್ಯದಲ್ಲಿ ಯುದ್ಧ ಚಿತ್ರಗಳು ಹೇಗೆ ಶಕ್ತಿವತ್ತಾಗಿ, ರೋಮಾಂಚಾನಕಾರಿಯಾಗಿ ಮೈದೋರುತ್ತವೆಂಬುದನ್ನು ಚಿತ್ರಿಸಿದ್ದಾರೆ. ಐತಿಹಾಸಿಕ ಕಥನಗೀತೆಗಳಲ್ಲಿ ಬರುವ ನಾಯಕರು, ವೀರರು, ಸ್ವರಾಷ್ಟ್ರ ಪ್ರೇಮಿಗಳು, ಹಾಗೆಯೇ ಸ್ವಾಭಿಮಾನನಿಷ್ಠರು. ಈ ನಾಡಿನ ಪರಂಪರೆಯ ಗೌರವವನ್ನು ಕಾಪಾಡಿ, ತಾಯ್ನಾಡಿಗೆ ಗೌರವವನ್ನು ತರಲು ಕಾದಾಡಿದ ಕಲಿಗಳ ಚಿತ್ರಣವಿದೆ. ಇವರುಗಳಲ್ಲಿ ಕುಮಾರರಾಮ, ಸಂಗೊಳ್ಳಿರಾಯಣ್ಣ,

ಕಿತ್ತೂರು ಚೆನ್ನಮ್ಮ, ಮಾಗಡಿ ಕೆಂಪೇಗೌಡ, ಮದಕರಿ ನಾಯಕ, ಪಿರಿಯಾಪಟ್ಟಣದ ವೀರರಾಜದೊರೆ, ತರೀಕೆರೆಯ ಸರ್ಜಪ್ಪನಾಯಕ ಮುಂತಾದವರನ್ನು ಕುರಿತು ಇರುವ ಐತಿಹಾಸಿಕ ಕಥನಗೀತೆಗಳಲ್ಲಿನ ಯುದ್ಧ ವರ್ಣನೆಯ ವಿಶೇಷ ಅಂಶಗಳನ್ನು ಲೇಖಕರು ಚರ್ಚಿಸಿದ್ದಾರೆ. ಈ ಕೃತಿಯ ಏಳನೆಯ ಲೇಖನ 'ಜನಪದರ ಮಳೆರಾಜ'. ಜನಪದರಿಗೂ ಮಳೆರಾಜನಿಗೂ ಇರುವ ಅವಿನಾಭಾವ ಸಂಬಂಧ ತಿಳಿಸುವ ಲೇಖನ. ಮಳೆರಾಜನ ಕುರಿತಾದ ಜನಪದ ಗೀತೆಗಳನ್ನು ಔಚಿತ್ಯವರಿತು ಬಳಸಿ, ವಿಶ್ಲೇಷಿಸಿರುವುದನ್ನು ಕಾಣಬಹುದು.

ಈ ಕೃತಿಯ ಕೊನೆಯ ಲೇಖನ 'ನುಚ್ಚಾಯ್ತು ನೀರ ಹೊಳೆಯಾಗೆ', ಮದುವೆಯಾದ ಹೆಣ್ಣೊಬ್ಬಳು ಪರಪುರುಷನನ್ನು ರಹಸ್ಯವಾಗಿ ಪ್ರೀತಿಸುತ್ತಿದ್ದು, ಅವನು ಸತ್ತು ಹೋದಾಗ ದುಃಖಿತೆಯಾದದ್ದು–ಇಂತಹ ವಸ್ತುವನ್ನು ಕುರಿತದ್ದು. ಹೊಳೆಯಿಂದ ನೀರು ತರುವ ಸಂದರ್ಭದಲ್ಲಿ ತನ್ನ ಪ್ರಿಯಕರ ಸತ್ತ ವಿಚಾರದಿಂದ ಅವಳ ಕೈಯಲ್ಲಿದ್ದ ಕೊಡ ಕೆಳಕ್ಕೆ ಬಿದ್ದು ನುಚ್ಚು ನೂರಾಗುವುದು ಅರ್ಥಪೂರ್ಣವಾಗಿ ಮೂಡಿಬಂದಿದೆ. ಇಲ್ಲಿ ಸಾಂಕೇತಿಕವಾಗಿ ಬರುವ ಕೊಡ ಪ್ರಣಯವನ್ನು ಸೂಚಿಸುತ್ತದೆ. ಕನ್ನಡ ಜನಪದ ಗೀತೆಗಳಲ್ಲಿ ಇದೊಂದು ಅತ್ಯಂತ ಹೃದಯ ವಿದ್ರಾವಕ ಪ್ರಣಯ ಪ್ರಸಂಗ.

ಡಿ.ಕೆ.ರಾಜೇಂದ್ರ ಅವರ ಚೊಚ್ಚಲ ಕೃತಿಯಾದ 'ಜಾನಪದ ಸಮೀಕ್ಷೆ'ಯ ನಿರೂಪಣೆಯಲ್ಲಿ ಸ್ಪಷ್ಟತೆಯಿದೆ, ಸರಳತೆಯಿದೆ. ಜಾನಪದ ಕ್ಷೇತ್ರ ಕುರಿತು ಕೆಲವು ಮೂಲಭೂತ ವಿಷಯಗಳ ದರ್ಶನ ಮಾಡಿಸುತ್ತದೆ.

ಜಾನಪದ ವಿವಿಧ ಮುಖಗಳನ್ನು ಪರಿಚಯಿಸುವ ಮತ್ತೊಂದು ಕೃತಿ **'ಜಾನಪದ ಸಂಚಯ'**. ಈ ಕೃತಿಯಲ್ಲಿ ಹತ್ತು ಬರಹಗಳಿವೆ. ಇಲ್ಲಿರುವ ಬಹುತೇಕ ಬರಹಗಳು ವಿವಿಧ ಸಮ್ಮೇಳನಗಳಲ್ಲಿ ಪ್ರಸ್ತುತಪಡಿಸಿದವುಗಳಾಗಿವೆ. ಈ ಕೃತಿಯ ಮೊದಲ ಲೇಖನವಾದ

‘ಹಾಸನಜಿಲ್ಲೆಯ ಜನಪದ ಕಲೆಗಳು’. ಜನಪದ ಕಲೆಗಳ ಮೇಲೆ ಬೆಳಕು ಚೆಲ್ಲುವ ಈ ಬರಹ ಒಂದು ಜಿಲ್ಲೆಯ ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಜನಪದ ಕಲೆಗಳ ಮಹತ್ವವನ್ನು ತಿಳಿಯಲು ಅನುಕೂಲವಾಗಿದೆ. ಆ ಮುಖೇನ ದಕ್ಷಿಣ ಕರ್ನಾಟಕದ ಜನಪದ ಕಲೆಗಳನ್ನು ಅರಿಯಲು ಸಾಧ್ಯವಾಗಿದೆ. ಧಾರ್ಮಿಕ ಹಿನ್ನೆಲೆಯುಳ್ಳ ನಂದಿಕೋಲು ಕುಣಿತ, ಸೋಮನ ಕುಣಿತ, ಪೂಜಾ ಕುಣಿತ ಮುಂತಾದ ಕಲೆಗಳು, ಗ್ರಾಮೀಣ ಹಿನ್ನೆಲೆಯುಳ್ಳ ಯಕ್ಷಗಾನ ಬಯಲಾಟ, ತೊಗಲುಬೊಂಬೆಯಾಟ, ಸೂತ್ರದ ಗೊಂಬೆಯಾಟ ಮುಂತಾದ ಕಲೆಗಳು ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ಪರಿಚಯದ ಜೊತೆಗೆ ಸಂಸ್ಕೃತಿಯ ಸಾರವನ್ನು ಬಿತ್ತುವಲ್ಲಿ ಸಫಲವಾಗಿವೆ ಎನ್ನುವ ಸತ್ಯದ ಅನಾವರಣವಿಲ್ಲಿದೆ. ಪಾಳೆಯಗಾರರ ವೇಷ, ಕೋಡಂಗಿ ವೇಷ, ಹುಲಿವೇಷದ ಪರಿಚಯವಿಲ್ಲಿದೆ. ಜನಪದ ಕಲೆಗಳ ಪ್ರಾಚೀನತೆಯ ಬಗ್ಗೆ ತಿಳಿಸುತ್ತ ಅವುಗಳ ವೈವಿಧ್ಯತೆಯನ್ನು ತಿಳಿಸುತ್ತದೆ. ಗ್ರಾಮೀಣ ಆಟಗಳಾದ ಒಳಾಂಗಣ, ಹೊರಾಂಗಣ ಆಟಗಳಲ್ಲಿ ಕತ್ತಿವರಸೆ, ದೊಣ್ಣೆವರಸೆ, ಕೋಲಾಟ, ಲಗ್ಗೆ ಚೆಂಡು, ಮರಕೋತಿ ಆಟಗಳಂತಹ ಪುರುಷ ಪ್ರಧಾನ ಆಟಗಳ ಜೊತೆ ಸ್ತ್ರೀ ಪ್ರಧಾನವಾದ ಆಟಗಳಾದ ಕುಂಟೆ ಬಿಲ್ಲೆ, ಜೂಜಾಟ, ಕಣ್ಣು ಮುಚ್ಚಾಲೆ, ಹರಳುಮನೆ ಆಟ, ಕುಂಟಾಟ ಮುಂತಾದ ಆಟಗಳ ಮಹತ್ವವನ್ನು ಚರ್ಚಿಸಿದ್ದಾರೆ. ಹಾಸನಜಿಲ್ಲೆಯಲ್ಲಿ ಕಂಡು ಬರುವ ಕರಪಾಲದವರು, ಗುಡ್ಡರು, ದೊಂಬಿದಾಸರು, ತಂಬೂರಿಯವರು ಮುಂತಾದ ವೃತ್ತಿಗಾಯಕರ ಬಗ್ಗೆ ಹಾಗೂ ಈ ಜಿಲ್ಲೆಯಲ್ಲಿಯೇ ಜನಿಸಿ ಜಾನಪದ ಕ್ಷೇತ್ರಕ್ಕೆ ವಿಶೇಷ ಸೇವೆ ಸಲ್ಲಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ ಅವರುಗಳ ವಿವರಗಳನ್ನು ಚಿತ್ರಿಸಿದ್ದಾರೆ. ಪ್ರಾಚೀನವೂ, ಶ್ರೀಮಂತವೂ ಆದ ಯಕ್ಷಗಾನ ಕಲೆಯ ಬಗ್ಗೆ ವಿಶೇಷವಾದ ಪ್ರಸ್ತಾಪದ ಜೊತೆಗೆ ಅದರ ಮಹತ್ವವನ್ನು ತಿಳಿಸುವಲ್ಲಿ ಈ ಲೇಖನ ಯಶಸ್ವಿಯಾಗಿದೆ.

ವೃತ್ತಿಗಾಯಕರ ವೈಶಿಷ್ಟ್ಯಗಳ ಮೇಲೆ ಬೆಳಕು ಚೆಲ್ಲುವ ಈ ಕೃತಿಯ ಎರಡನೆಯ ಲೇಖನ 'ದಕ್ಷಿಣ ಕರ್ನಾಟಕದ ವೃತ್ತಿ ಗಾಯಕರು'. ಧಾರ್ಮಿಕ ವೃತ್ತಿ ಗಾಯಕರು ಹಾಗೂ ಲೌಕಿಕ ವೃತ್ತಿ ಗಾಯಕರೆಂದು ವಿಂಗಡಿಸಿ, ಧಾರ್ಮಿಕ ವೃತ್ತಿಗಾಯಕರಲ್ಲಿ ಮಂಟೇದವರು, ಕಂಸಾಳೆಯವರು, ಚೌಡಿಕೆಯವರು, ಜುಂಜಪ್ಪನವರು, ಜೋಗಿಗಳು, ಗೊರವರು ಹಾಗೂ ಲೌಕಿಕ ವೃತ್ತಿ ಗಾಯಕರಲ್ಲಿ ಹೆಳವರು, ಕರಪಾಲದವರು, ದೊಂಬಿದಾಸರು, ತಂಬೂರಿಯವರು, ತೆಲುಗು ಜಂಗಮರು ಇವರುಗಳ ವೇಷಭೂಷಣಗಳು, ಧಾರ್ಮಿಕ, ಐತಿಹಾಸಿಕ, ಪೌರಾಣಿಕ ಕಥೆಗಳ ಹಾಡುಗಾರಿಕೆ, ವಾದ್ಯ ಪರಿಕರಗಳ ಸವಿವರವಿರುವುದನ್ನು ಕಾಣಬಹುದು. ಇಂತಹ ವೃತ್ತಿಗಾಯಕರು ಯಾವ ಯಾವ ಪ್ರದೇಶಗಳಲ್ಲಿ ಕಂಡು ಬರುತ್ತಾರೆಂದು ಸುದೀರ್ಘವಾಗಿ ಪ್ರಸ್ತಾಪಿಸಿರುವುದನ್ನು ಗಮನಿಸಬಹುದು.

ಶಿಷ್ಟ ಸಾಹಿತ್ಯದಂತೆಯೇ ಜನಪದ ಸಾಹಿತ್ಯದಲ್ಲಿಯೂ 'ಶಿಶು ಸಾಹಿತ್ಯ' ಹೇರಳವಾಗಿದೆ ಎಂದು ಗುರುತಿಸುತ್ತಾ ಅದರ ವ್ಯಾಪ್ತಿ ಮತ್ತು ಮಹತ್ವವನ್ನು ಕುರಿತ ಹೇಳುವ ಮತ್ತೊಂದು ಲೇಖನ 'ಶಿಶು ಪ್ರಾಸಗಳು'. ಮಕ್ಕಳ ಹಾಡುಗಳನ್ನು ಪ್ರಮುಖವಾಗಿ ಆಟದ ಜೊತೆ ಬರುವ ಸಾಹಿತ್ಯ,ಆಟದ ಯಾವ ಸಂದರ್ಭವೂ ಇಲ್ಲದೆ ಸ್ವತಂತ್ರವಾಗಿ ಹಾಡಿಕೊಳ್ಳುವ ಹಾಡುಗಳು ಎಂದು ವಿಭಾಗಿಸಿ ಅವುಗಳಿಗೆ ಪೂರಕ ಹಾಡುಗಳನ್ನು ಉದಾಹರಿಸಿ ಅವುಗಳಲ್ಲಿರುವ ಸಾಹಿತ್ಯದ ಅಂಶಗಳನ್ನು ಗುರುತಿಸಿರುವುದನ್ನು ಕಾಣಬಹುದು. ಮಕ್ಕಳಿಗೆ ಪ್ರಿಯವಾದ, ಜನಪದ ಸಾಹಿತ್ಯದಲ್ಲಿ ಜನಪ್ರಿಯವಾದ ಶಿಶುಗೀತೆಗಳ ಪ್ರಯೋಗವಾಗಿರುವುದನ್ನು ಈ ಲೇಖನದಲ್ಲಿ ಕಾಣಬಹುದು.

ಜನಪದ ಸಾಹಿತ್ಯದ ಪ್ರಾದೇಶಿಕ ವೈಶಿಷ್ಟ್ಯದ ಸೂಕ್ಷ್ಮತೆಯ ಜೊತೆಗೆ ಜಾನಪದ ಕ್ಷೇತ್ರಕ್ಕೆ ಮಂಡ್ಯಜಿಲ್ಲೆಯ ಕೊಡುಗೆಯನ್ನು ತಿಳಿಸುವ ಲೇಖನ 'ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯ'. ಶ್ರೀ ಆದಿಚುಂಚನಗಿರಿಯಲ್ಲಿ

ನಿರ್ಮಿತಗೊಂಡಿರುವ ಶ್ರೀ ಗವಿಗಂಗಾಧರೇಶ್ವರ ದೇವಾಲಯ, ಇಲ್ಲಿಯ ಶ್ರೀ ಮಠ, ಕಲ್ಯಾಣಿ, ಗುಡಿಗೋಪುರಗಳು, ಗಳಿಗೆಕಲ್ಲು, ಚೋಳೂರು ಕಂಬ, ಗವಿಸಿದ್ಧನಗುಡಿ, ಕತ್ತಲು ಸೋಮೇಶ್ವರನ ಗುಡಿ, ಬಾಗಿಲು ಭೈರವನ ಗುಡಿ ಮುಂತಾದುವನ್ನು ಕುರಿತ ಜನಪದ ಹಾಡುಗಳು ಹೇರಳವಾಗಿರುವುದನ್ನು ಗುರುತಿಸಿದ್ದಾರೆ. ಶ್ರೀ ಆದಿಚುಂಚನಗಿರಿಯ ಜನಪದ ಗೀತೆಗಳು, ಆದಿಚುಂಚನಗಿರಿ, ಭಕ್ತರು ಬರುತ್ತಾರೆ. ಗಂಗಾಧರನ ತೇರು, ಕುಸುಮಾಲೆ ಮಾಳಮ್ಮ, ಕನ್ನೆ ಕಂಬದವ್ವ ನೆನೆದೇವು– ಮುಂತಾದ ಕೃತಿಗಳ ಪ್ರಸ್ತಾಪವಿದೆ. ಈಗ ನೀಲಗಾರರು ಎಂದು ಕರೆಯಲ್ಪಡುವ ಹಿಂದೆ ಮಂಟೇದವರು ಎಂದು ಕರೆಯಲ್ಪಡುತ್ತಿದ್ದ ಧಾರ್ಮಿಕ ವೃತ್ತಿಗಾಯಕರ ಕುರಿತಾದ ವಿವರಗಳಿವೆ. ಅವರು ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿಯವರ ಪವಾಡಗಳನ್ನು, ದೈವತ್ವದ ಹಿರಿಮೆಯನ್ನು ಕುರಿತ ಹಾಡುಗಳ ಮಹತ್ವದ ಜೊತೆಗೆ ಅವರ ವೇಷಭೂಷಣಗಳು, ವಾದ್ಯ ಪರಿಕರಗಳ ಬಗ್ಗೆ ಮಾಹಿತಿ ಸಂಗ್ರಹಿಸಿರುವುದು ಜಾನಪದ ಕ್ಷೇತ್ರದಲ್ಲಿ ಲೇಖಕರಿಗಿರುವ ಪ್ರಬುದ್ಧತೆಯನ್ನು ಗುರುತಿಸಬಹುದು. ನೀಲಗಾರರು ತಮ್ಮ ಧಾರ್ಮಿಕ ಕಥೆಯ ಜೊತೆಗೆ ಬಿಳಿಗಿರಿರಂಗನ ಕಥೆ, ಮೈದಾಲರಾಮ, ಚಲುವರಾಮ, ವರನಂದಿ, ಲಿಂಗರಾಜಮ್ಮನ ಕಥೆ, ಗಣಪತಿರಾಯನ ಕಥೆ, ಸಾರಂಗಧರ, ಪಿರಿಯಾಪಟ್ಟಣ ಕಾಳಗ, ಬಾಲನಾಗಮ್ಮನ ಕಥೆ ಮುಂತಾದ ಲೌಕಿಕ ಕಥೆಗಳನ್ನು ಹಾಡುತ್ತಾರೆ ಎಂಬ ವಿವರವಿರುವುದನ್ನು ಕಾಣಬಹುದು. ನೀಲಗಾರರಂತೆಯೇ ಧಾರ್ಮಿಕ ಮತ್ತು ಲೌಕಿಕ ಕಥೆಗಳನ್ನು ಹಾಡುವ ವೃತ್ತಿಗಾಯಕರಾದ ಕಂಸಾಳೆಯವರ ಬಗ್ಗೆ ತಿಳಿಸುತ್ತಾ, ಅವರು ಪಿರಿಯಾಪಟ್ಟಣದ ಕಾಳಗ, ಬಾಲನಾಗಮ್ಮ, ಲಿಂಗರಾಜಮ್ಮನ ಕತೆ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ ಮುಂತಾದ ಲೌಕಿಕ ಕಥೆಗಳನ್ನು ಹಾಡುತ್ತಾರೆಂದು ಹೇಳಿದ್ದಾರೆ. ಈ ಎರಡೂ ವೃತ್ತಿಗಾಯಕ ವರ್ಗದವರ ಸಾಹಿತ್ಯದ ಮಹತ್ವವನ್ನು ಅರಿಯಲು ಈ ಲೇಖನ ಪೂರಕವಾಗಿದೆ. ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಸಂಗ್ರಹವಾಗಿರುವ ಜನಪದ ಸಾಹಿತ್ಯದಲ್ಲಿ

ಬಹುಪಾಲು ಜೀಶಂಪ ಅವರಿಗೆ ಸಲ್ಲಬೇಕು ಎನ್ನುತ್ತಾ ಅವರು ಕೊಟ್ಟ ಕೊಡುಗೆಗಳನ್ನು ವಿವರಿಸಿದ್ದಾರೆ. ಅವರ ನೆನೆದೇವು, ನಮ್ಮ ಜನಪದ ಸಾಹಿತ್ಯ, ಜನಪದ ಸಾಹಿತ್ಯ ಸಮೀಕ್ಷೆ, ಜನಪದ ಖಂಡಕಾವ್ಯಗಳು – ಜನಪದ ಕಾವ್ಯಕಥೆಗಳು – ಈ ಕೃತಿಗಳ ಮೂಲಕ ಮಂಡ್ಯ ಜಿಲ್ಲೆಯ ಸಾಹಿತ್ಯದ ಸೊಬಗನ್ನು ಪರಿಚಯಿಸುವ ಕಾರ್ಯವನ್ನು ಜೀಶಂಪ ಮಾಡಿದ್ದಾರೆಂದು ಗುರುತಿಸುತ್ತಾರೆ. ಹಾಗೆಯೇ ಕರಾಕೃ ಅವರ ಸಂಪಿಗೆ ಅರಳಾವೆ, ಕೋಲು ಮಲ್ಲಿಗೆ ಕೋಲೆ, ಸೂಸಿ ಹರಿದಾಳೆ ಶಿವಗಂಗೆ, ಚನ್ನಗಿ ಚಲುವಯ್ಯ, ಜೇನಹನಿಗಳು, ಹೆಣ್ಣುಕೊಟ್ಟೇವು, ಜನಪದ ಪ್ರೇಮಗೀತೆಗಳು ಮುಂತಾದುವು. ಅರ್ಚಕ ಬಿ.ಎನ್.ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು', ರಾಗೌ ಅವರ 'ಕರ್ನಾಟಕ ಜನಪದ ಕಥೆಗಳು', ಡಿ.ಲಿಂಗಯ್ಯ ಅವರ 'ಮಣ್ಣಿನ ಮಿಡಿತ', ಜಿ.ವಿ.ಡಿ.ಅವರ 'ಹಾವಾಗಿ ಹರಿದ ಅಣ್ಣಯ್ಯ' ಮುಂತಾದುವು. ಹೀಗೆ ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯ ಕುರಿತ ವಿವಿಧ ವಿದ್ವಾಂಸರ ಕೃತಿಗಳ ವಿವರಗಳನ್ನು ಈ ಲೇಖನ ಒಳಗೊಂಡಿದೆ.

ಜನಪದ ಸಾಹಿತ್ಯದ ಎರಡು ತ್ರಿಪದಿಗಳನ್ನು ಅನುಲಕ್ಷಿಸಿ, ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ಭಿನ್ನತೆಗಳನ್ನು ಹಾಗೂ ಮಹತ್ವವನ್ನು ಗುರುತಿಸುವ ಇನ್ನೊಂದು ಲೇಖನ 'ಎರಡು ಜನಪದ ತ್ರಿಪದಿಗಳು : ಒಂದು ವಿವೇಚನೆ'. 'ಜನವಾಣಿ ಬೇರು ಕವಿವಾಣಿ ಹೂವು' ಎಂಬಂತೆ ಜನಪದ ಸಾಹಿತ್ಯ ಹೊರತುಪಡಿಸಿ ಶಿಷ್ಟ ಸಾಹಿತ್ಯವಿಲ್ಲ. ಜನಪದ ಸಾಹಿತ್ಯ, ಅಂತಃಸತ್ವದಲ್ಲಿ ಯಾವ ಶಿಷ್ಟ ಸಾಹಿತ್ಯಕ್ಕೂ ಕಡಿಮೆಯಿಲ್ಲ ಎನ್ನುವ ನಿಲುವನ್ನು ಈ ಲೇಖನ ಪ್ರತಿಪಾದಿಸುತ್ತದೆ. ಈ ನಿಟ್ಟಿನಲ್ಲಿ ಲೇಖಕರು ಜನಪದ ಸಾಹಿತ್ಯವನ್ನು ವಿದ್ಯಾವಂತರು ಗಮನಿಸುವಾಗ 'ಪಾಂಡಿತ್ಯದ ಕನ್ನಡಕವನ್ನು ತೊಟ್ಟು ನೋಡದಿರಲಿ' ಎಂದು ಸೂಚಿಸಿರುವುದನ್ನು ಗಮನಿಸಬಹುದು.

'ಎಂಟು ವಿಮರ್ಶಾತ್ಮಕ ಕೃತಿಗಳು' ಎನ್ನುವ ಈ ಕೃತಿಯ

ಆರನೆಯ ಲೇಖನದ ಆಯ್ದ ಜಾನಪದ ವಿದ್ವಾಂಸರ ಎಂಟು ಕೃತಿಗಳ ಮಹತ್ವವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಜೀಶಂಪ ಅವರ ೧೯೬೭ರಲ್ಲಿ ಪ್ರಕಟಗೊಂಡ 'ಜನಪದ ಸಾಹಿತ್ಯ ಸಮೀಕ್ಷೆ' ಮತ್ತು ಇದೇ ವರ್ಷದಲ್ಲಿ ಪ್ರಕಟಗೊಂಡ ಮತ್ತೊಂದು ವಿಮರ್ಶಾಕೃತಿಯಾದ 'ನಮ್ಮ ಜನಪದ ಸಾಹಿತ್ಯ' ಎನ್ನುವ ಎರಡು ಕೃತಿಗಳ ಕುರಿತಾದ ಮಹತ್ವಪೂರ್ಣವಾದ ಚರ್ಚೆಯಿದೆ. ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದ ನೆನಪಿನ ಸಂಚಿಕೆಯಾಗಿ ಬಿಡುಗಡೆ ಹೊಂದಿದ, ಐವತ್ತೇಳು ಮಂದಿ ವಿದ್ವಾಂಸರ ಲೇಖನಗಳನ್ನೊಳಗೊಂಡ 'ಹೊನ್ನ ಬಿತ್ತೇವು ಹೊಲಕೆಲ್ಲ' ಕೃತಿ ಕುರಿತ ವಿಶ್ಲೇಷಣೆ ಇದೆ. ಜನಪದ ಸಾಹಿತ್ಯದ ಕಾವ್ಯಾತ್ಮಕ ಮೌಲ್ಯವನ್ನು ವಿವೇಚಿಸುವ, ವಿಶ್ಲೇಷಿಸುವ ಸಿ.ಪಿ.ಕೆ. ಅವರ 'ಜಾನಪದ ಪ್ರತಿಭೆ' ಕೃತಿಯ ವಿಶೇಷತೆಗಳ ಬಗ್ಗೆ ಚರ್ಚಿಸಲಾಗಿದೆ. ಜಾನಪದದ ಆರು ಮುಖಗಳನ್ನು ಪರಿಶೀಲಿಸುವ ನಂ.ತಪಸ್ವಿಕುಮಾರ್ ಅವರ 'ಜನಪದ ಸಂಸ್ಕೃತಿ' ಕೃತಿಯ ಬಗ್ಗೆ ಲೇಖಕರ ಅಭಿಪ್ರಾಯಗಳನ್ನು ಗಮನಿಸಬಹುದು. ಸ್ವತಃ ಲೇಖಕರೇ ಹೊರತಂದಿರುವ 'ಜಾನಪದ ಸಮೀಕ್ಷೆ' ಕೃತಿಯಲ್ಲಿ ಅಲ್ಲಿರುವ ವಿಮರ್ಶಾ ಲೇಖನಗಳನ್ನು ಚರ್ಚಿಸಿರುವುದನ್ನು ಕಾಣಬಹುದು. ಪಾಶ್ಚಾತ್ಯ ದೇಶಗಳಲ್ಲಿ ಜಾನಪದ ಕುರಿತು ನಡೆದ ಅಧ್ಯಯನಗಳನ್ನು ಪೂರ್ಣ ಪರಿಚಯಿಸುವ ತೀ.ನಂ.ಶಂಕರನಾರಾಯಣ ಅವರ 'ಜಾನಪದ ಮೈಲಿಕಲ್ಲುಗಳು' ಕೃತಿಯ ಬಗ್ಗೆ ವಿವರವಿದೆ. ಹಾ.ಮಾ.ನಾ ಅವರ 'ಜಾನಪದ ಸ್ವರೂಪ' ಎನ್ನುವ ಕೃತಿಯು ಜಾನಪದದ ವೈಶಿಷ್ಟ್ಯ ಹಾಗೂ ಸ್ವರೂಪವನ್ನು ಪರಿಚಯಿಸುವಲ್ಲಿ ಹೇಗೆ ಸಫಲವಾಗಿದೆ ಎಂಬುದನ್ನು ತಿಳಿಸುವ ಪ್ರಯತ್ನವಿಲ್ಲಿದೆ. ಹೀಗೆ ಎಂಟು ಪ್ರಮುಖ ಕೃತಿಗಳ ಔಚಿತ್ಯವನ್ನು ತಿಳಿಸುವ ಈ ಲೇಖನ, ಜಾನಪದ ಕುರಿತು ಲೇಖಕರಿಗೆ ಇರುವ ಪ್ರಬುದ್ಧತೆಯನ್ನು ತಿಳಿಸುತ್ತದೆ.

ಯಕ್ಷಗಾನ ಬಯಲಾಟದಲ್ಲಿ ಬರುವ ಪಾತ್ರಗಳು, ವೇಷಭೂಷಣಗಳ

ಬಗ್ಗೆ ಬೆಳಕನ್ನು ಚೆಲ್ಲುವ ಈ ಕೃತಿಯ ಏಳನೇ ಲೇಖನ 'ಬಯಲಾಟದ ವೇಷಭೂಷಣಗಳು'. ಬಯಲಾಟದ ಸಂದರ್ಭದಲ್ಲಿ ಬಳಸುವ ಪ್ರತಿಯೊಂದು ವಸ್ತುಗಳ ಪರಿಚಯದ ಜೊತೆಗೆ ಅವುಗಳ ವೈಶಿಷ್ಟ್ಯತೆಯನ್ನು ತಿಳಿಸುವ ಮಹತ್ವಪೂರ್ಣ ಲೇಖನ ಇದಾಗಿದೆ. ಯಕ್ಷಗಾನ ಬಯಲಾಟ ಪ್ರದರ್ಶನದ ವೇಳೆಯಲ್ಲಿ ನಡೆಯುವ ಕೆಲವು ವಿಶೇಷತೆಗಳನ್ನು ಗುರುತಿಸುವ ಪ್ರಯತ್ನ ಈ ಕೃತಿಯ 'ಬಯಲಾಟದ ಕೆಲವು ಸ್ವಾರಸ್ಯ ಘಟನೆಗಳು' ಎಂಬಲ್ಲಿದೆ. ಗಂಭೀರ ಪಾತ್ರವೇ ಆಗಲಿ, ಹಾಸ್ಯ ಪ್ರಧಾನ ಪಾತ್ರವೇ ಆಗಲಿ, ಅಲ್ಲಿಯ ಪಾತ್ರಗಳ ವರ್ತನೆ ಸ್ವಾರಸ್ಯಕರವಾಗಿರುತ್ತದೆ ಎಂದು ಗುರುತಿಸುತ್ತಾ ಪ್ರದರ್ಶನದ ಸಂದರ್ಭದಲ್ಲಿ ಸಹಜ ಮಾನವತ್ವ ಹಾಗೂ ಅದರ ಅಂಕುಡೊಂಕುಗಳ ಬಗ್ಗೆ ವಿಶ್ಲೇಷಿಸಿರುವುದರಿಂದ ಲೇಖಕರಿಗಿರುವ ಸೂಕ್ಷ್ಮ ಅವಲೋಕನ ಅರಿವಿಗೆ ಬಾರದೆ ಇರದು.

ಜನಪದ ಸಾಹಿತ್ಯದಲ್ಲಿ ಗೀತ ಸಾಹಿತ್ಯಕ್ಕೆ ಅಗ್ರಸ್ಥಾನ. ಜನಪದ ಗೀತೆಗಳನ್ನು ಬಿಡಿ ಹಾಡುಗಳು ಅಥವಾ ಗೃಹಿಣಿ ಗೀತೆಗಳು, ಲಾಲಿಪದ, ಸಂಸಾರಕ್ಕೆ ಸಂಬಂಧಿಸಿದ ಗೀತೆಗಳು, ಭಕ್ತಿಗೀತೆಗಳು, ನೀತಿಪದಗಳು, ಹಾಸ್ಯ ಹಾಡುಗಳು, ಶಾಸ್ತ್ರದ ಹಾಡುಗಳು, ಕೋಲಾಟದ ಪದಗಳು, ಶಿಶುಪ್ರಾಸಗಳು, ಕಥನಗೀತೆಗಳು ಎಂದು ವಿಂಗಡಿಸಿ, ಅವುಗಳ ಸ್ವರೂಪ ಮತ್ತು ಮಹತ್ವ ಕುರಿತು ವಿಶ್ಲೇಷಿಸಿರುವುದನ್ನು 'ಜನಪದ ಗೀತ ಪ್ರಕಾರಗಳು' ಲೇಖನದಲ್ಲಿ ಗುರುತಿಸಬಹುದು. ಜೊತೆಗೆ ಪ್ರತಿಯೊಂದು ಪ್ರಕಾರಕ್ಕೂ ಕೆಲವು ಗೀತೆಗಳನ್ನು ಉದಾಹರಣೆಯಾಗಿ ಕೊಟ್ಟು ಚರ್ಚಿಸಿರುವುದನ್ನು ಕಾಣಬಹುದು. ಕೊನೆಯ ಲೇಖನ 'ಜಾನಪದ ವಸ್ತು ಸಂಗ್ರಹಾಲಯಗಳು'. ಜಾನಪದ ವಸ್ತು ಸಂಗ್ರಹಣೆಯಲ್ಲಿ ಪಾಶ್ಚಾತ್ಯರ ಧೋರಣೆ ಹಾಗೂ ಭಾರತದ ಸಂದರ್ಭದಲ್ಲಿ ಇಲ್ಲಿಯ ವಸ್ತು ಸಂಗ್ರಹಾಲಯಗಳ ಸ್ಥಿತಿ–ಗತಿ ಕುರಿತ ಅವಲೋಕನವಿದೆ. ದಕ್ಷಿಣಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು

ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಪ್ರಾರಂಭಿಸಲಾಗಿರುವ 'ಜಾನಪದ ವಸ್ತು ಸಂಗ್ರಹಾಲಯ'ದ ಮಹತ್ವವನ್ನು ಕುರಿತು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ಈ ಸಂಗ್ರಹಾಲಯದ ಸೃಷ್ಟಿಗೆ ಕಾರಣರಾದ ವಿದ್ವಾಂಸರುಗಳ ಪರಿಚಯದ ಜೊತೆಗೆ ಇದಕ್ಕಿರುವ ಐತಿಹಾಸಿಕ ಮಹತ್ವವನ್ನು ಅರಿಯಲು ಈ ಲೇಖನ ಸಹಕಾರಿಯಾಗಿದೆ.

ಈ ಕೃತಿಯಲ್ಲಿರುವ ಹತ್ತೂ ಲೇಖನಗಳು ಜಾನಪದ ಕ್ಷೇತ್ರದ ಹತ್ತು ಮುಖಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ. ಲೇಖಕರ ದೂರದೃಷ್ಟಿಯ ಫಲ, ಆಳವಾದ ಕ್ಷೇತ್ರ ಕಾರ್ಯದ ಅನುಭವ, ಜಾನಪದ ಕ್ಷೇತ್ರದಲ್ಲಿ ಅವರಿಗಿರುವ ಬದ್ಧತೆ – ಇವುಗಳ ಪ್ರತಿಫಲವಾಗಿ ಇಲ್ಲಿಯ ಲೇಖನಗಳು ಮೂಡಿ ಬಂದಿವೆ.

ಬಹುಮುಖಿ ಆಲೋಚನೆಗಳ ವ್ಯಕ್ತಿತ್ವವುಳ್ಳ ಡಿ.ಕೆ.ರಾಜೇಂದ್ರ ಅವರ ಜಾನಪದ ವೈಶಿಷ್ಟ್ಯಗಳನ್ನು ಕುರಿತ ಮತ್ತೊಂದು ಕೃತಿ **'ಜಾನಪದ ಸಮಾಲೋಕ'**. ಜನಪದ ಕಲೆ ಮತ್ತು ಸಂಸ್ಕೃತಿ', 'ಜನಪದ ಕಲೆಗಳು ಮತ್ತು ಧರ್ಮ', 'ಬಯಲಾಟಗಳ ಜೀವಾಳ', 'ಕಥೆಗಾರ ಮೇಳ', 'ಜಾನಪದ ನೃತ್ಯನಾಟಕಗಳು ಮತ್ತು ಬೊಂಬೆಯಾಟಗಳು', 'ಜನಪದ ಸಾಹಿತ್ಯದಲ್ಲಿ ಉತ್ತರದೇವಿ', 'ಕರ್ನಾಟಕ ಅಧ್ಯಯನ' ಎಂಬ ವಿಷಯಗಳನ್ನು ವಸ್ತು ನಿಷ್ಠವಾಗಿ, ವಿಮರ್ಶನಾ ದೃಷ್ಟಿಕೋನದಿಂದ ಚಿತ್ರಿಸಿರುವುದರಿಂದ ಇದೊಂದು ಅತ್ಯುತ್ತಮ ಕೃತಿಯಾಗಿದೆ.

೧೯೭೭ರಲ್ಲಿ ಪ್ರಕಟಗೊಂಡ ಜಾನಪದ ವೈವಿಧ್ಯತೆ ಕುರಿತ ಡಿ.ಕೆ. ರಾಜೇಂದ್ರ ಅವರ ಕೃತಿ **'ಜಾನಪದ ಸಮನ್ವಯ'**. ಇದರಲ್ಲಿ ಐದು ವಿದ್ವತ್ಪೂರ್ಣ ಲೇಖನಗಳಿವೆ. ಮೊದಲ ಲೇಖನ 'ಜನಪದ ಕಲೆ ಮತ್ತು ಮತಧರ್ಮ', ಇವೆರೆಡರ ಸಂಬಂಧವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಪ್ರದರ್ಶನಾತ್ಮಕ ಕಲೆಗಳಲ್ಲಿ ವಿಶಿಷ್ಟ ಕಲೆಯಾದ, ಕಲಾಲೋಕದಲ್ಲಿ

ಮಾಯಾಲೋಕವನ್ನು ಸೃಜಿಸುವ 'ತೊಗಲುಬೊಂಬೆಯಾಟ' ಎರಡನೆಯ ಲೇಖನ. ಸಮರ್ಪಕ ಕ್ಷೇತ್ರ ಕಾರ್ಯ ಹಾಗೂ ವಿಷಯ ಸಂಗ್ರಹಣೆಯ ಫಲವಾಗಿ ಮೂಡಿಬಂದ ಲೇಖನ. ಜನಪದ ಸಂಸ್ಕೃತಿಯ ಅಂತರಾಳದಲ್ಲಿ ನೆಲೆಗೊಂಡು, ಮಾನವ ಜೀವನವನ್ನು ನಿಯಂತಿಸುವ ಪ್ರಬಲ ಶಕ್ತಿಗಳಾದ 'ನಂಬಿಕೆ'ಗಳ ಬಗ್ಗೆ ಬೆಳಕು ಚೆಲ್ಲುವ ಲೇಖನ ಮೂರನೆಯದಾಗಿದೆ. ಇಲ್ಲಿ ನಂಬಿಕೆಗಳನ್ನು ವರ್ಗೀಕರಿಸಿ ವಿವೇಚಿಸುವ ಪರಿ ವಿಶೇಷತೆಯಿಂದ ಕೂಡಿದೆ. ನಂಬಿಕೆಗಳು ಸಾಮಾನ್ಯವಾಗಿ ಮಾನವನ ಶರೀರ ಮತ್ತು ಜನಪದ ವೈದ್ಯಕ್ಕೆ ಸಂಬಂಧಪಟ್ಟವುಗಳು, ಹುಟ್ಟು, ವಿವಾಹ ಮತ್ತು ಸಾವಿನಂತಹ ಜೀವನ ಚಕ್ರಕ್ಕೆ ಸಂಬಂಧಿಸಿದವುಗಳು, ಧಾರ್ಮಿಕ, ಪ್ರವಾಸ, ವ್ಯವಹಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ಮತ್ತು ಸಾಮಾಜಿಕಕ್ಕೆ ಸಂಬಂಧಿಸಿದವುಗಳು ಎಂದು ವರ್ಗೀಕರಿಸುತ್ತಾರೆ. ಅನಂತರ ವ್ಯವಸಾಯ ಜೀವನಕ್ಕೆ ಸಂಬಂಧಿಸಿದವುಗಳು – ಅದರಲ್ಲಿ ಹವಾಮಾನ, ಸಸ್ಯಬೆಳೆಸುವುದು, ಪ್ರಾಣಿ ಸಾಕಾಣಿಕೆ, ಬೇಟೆ ಮತ್ತು ಮೀನು ಹಿಡಿಯುವುದು ಹೀಗೆ ನಂಬಿಕೆಗಳನ್ನು ವರ್ಗೀಕರಿಸಿ ವಿಶ್ಲೇಷಿಸಿರುವುದು ಔಚಿತ್ಯಪೂರ್ಣವೆನಿಸಿದೆ. ಅನೇಕ ನಂಬಿಕೆಗಳನ್ನು ಪ್ರಸ್ತಾಪಿಸಿ ಅವುಗಳ ಬಗ್ಗೆ ಇರುವ ಜನಪದರ ಮನಃಸ್ಥಿತಿಯನ್ನು ವೈಜ್ಞಾನಿಕ ಹಾಗೂ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ವಸ್ತುಸ್ಥಿತಿಯನ್ನು ಅರಿಯುವ ಪ್ರಯತ್ನವಿಲ್ಲಿದೆ.

ಈ ಕೃತಿಯ ನಾಲ್ಕನೇ ಲೇಖನ 'ಕರಪಾಲಮೇಳ', ಸಂಗೀತ, ಸಾಹಿತ್ಯ ನೃತ್ಯಗಳಿಂದ ಮುಪ್ಪುರಿಗೊಂಡ ಸಮ್ಮಿಶ್ರಕಲೆ, ಈ ಮೇಳವನ್ನು ನಡೆಸುವವರಿಗೆ ಕರಪಾಲದವರು, ಕರಪಾಲ ಮೇಳದವರು ಎನ್ನುತ್ತಾರೆ. ಮುಖ್ಯ ಕಥೆಗಾರರನನ್ನು 'ಕರಪಾಲದಯ್ಯ' ಎನ್ನುತ್ತಾರೆ. ಲೌಕಿಕ ವೃತ್ತಿ ಗಾಯಕರಾದ ಕರಪಾಲದವರು ಶಿವಕಥೆಗಳನ್ನೇ ವಿಶೇಷವಾಗಿ ಪ್ರಸಾರ ಮಾಡಿದರೂ ಯಾವ ಒಂದು ದೈವಕ್ಕೆ ನಿರ್ದಿಷ್ಟವಾಗಿ ಅಂಟದೆ ಯಾವ ಒಂದು ಧರ್ಮ ಪ್ರಸಾರವನ್ನು ಕೈಗೊಂಡವರಲ್ಲ.

ಅಲ್ಲಿ ಕಲೆ ಪ್ರಧಾನವಾಗಿ ಧರ್ಮ ಗೌಣವಾಗಿರುತ್ತದೆಂದು ಈ ಮೇಳದ ಮಹತ್ವವನ್ನು ವಿಶ್ಲೇಷಿಸುತ್ತಾರೆ. ಉತ್ತರ ಕರ್ನಾಟಕದ ಕಡೆ ಪ್ರಚಲಿತವಿರುವ 'ಕರಪಲ್ಲ', ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಕರಪಾಲಮೇಳ' ಇವುಗಳಿಗಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಚರ್ಚಿಸಿರುವುದನ್ನು ಕಾಣಬಹುದು. 'ಕರಪಲ್ಲ' ಎಂಬ ಪದದ ನಿಷ್ಪತ್ತಿಯ ಬಗ್ಗೆ ವಿವಿಧ ವಿದ್ವಾಂಸರುಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಚರ್ಚಿಸಿರುವ ಪರಿ ಇಲ್ಲಿದೆ. ಸಮ್ಮಿಶ್ರ ಕಲೆಯಾದ 'ಕರಪಾಲ ಮೇಳ'ವನ್ನು ಹಾಸನ, ಅರಸೀಕೆರೆ, ತಿಪಟೂರು ಭಾಗಗಳಲ್ಲಿ ಗುರುತಿಸಿ, ಈ ಮೇಳದ ಪಾತ್ರವರ್ಗ, ವೇಷಭೂಷಣಗಳು, ವಾದ್ಯ ಪರಿಕರಗಳು ಹಾಗೂ ಕಥೆಗಳ ವಿವರವನ್ನು ಚಿತ್ರಿಸಿದ್ದಾರೆ. ಸಾಮಾನ್ಯ ಜನಪದ ಕಥೆಗಳನ್ನೊಳಗೊಂಡ ಈ ಮೇಳ ಕಲಾವಿದನ ಕೈಯಲ್ಲಿ ವಿಶಿಷ್ಟರೂಪವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಗುರುತಿಸುತ್ತಾರೆ. ಕಾಡುಸಿದ್ದಮ್ಮನ ಕಥೆ, ನೀಲಕಂಠ, ರೂಪಾವತಿ, ಬಸವಕುಮಾರ – ಲೋಹಿತ ಕುಮಾರ, ರುದ್ರೇಶ್ವರ ಮಹಾತ್ಮೆ ಮೊದಲಾದ ಕೆಲವು ಕಥೆಗಳು ಕರಪಾಲದ ಕಥೆಯ ಸ್ವರೂಪವನ್ನು ಪಡೆದಾಗ ನಿರೂಪಕನ ಬಾಯಲ್ಲಿ ಮೋಹಕವಾಗಿ ಹೊಸರೂಪವನ್ನು ಪಡೆದು ಹೊರಬರುವಾಗ ಇನ್ನೂ ಆಕರ್ಷಕವಾಗಿ, ರಸವತ್ತಾಗಿ ತೋರುತ್ತವೆ ಎಂಬುದನ್ನು ವಿಶ್ಲೇಷಿಸುವುದರ ಮುಖೇನ ಅವುಗಳ ಮಹತ್ವವನ್ನು ಚರ್ಚಿಸಿದ್ದಾರೆ.

ಜನಪದ ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯಗಳೆರಡರಲ್ಲಿಯೂ ವಿಶೇಷವಾಗಿ ಮನ್ನಣೆ ಪಡೆದಿರುವ 'ಮೈದುನ ರಾಮಣ್ಣ' ಈ ಕೃತಿಯ ಕೊನೆಯ ಲೇಖನ. ಸೊಗಸಾದ ಕಾವ್ಯದಂತಿರುವ ಈ ಲಾವಣಿಯ ಉದ್ದಕ್ಕೂ ಹರಿದು ಬರುವ ಭಕ್ತಿರಸ, ಆ ಬಾಲಕನ ಮುಗ್ಧಭಾವದ ಹೋರಾಟ, ಕವಿಯ ಸಮಯೋಚಿತ ವರ್ಣನೆ, ಒಂದು ಹೆಚ್ಚಿನ ಸೊಗಸನ್ನು ತಂದುಕೊಟ್ಟಿದೆ ಎಂದು ವಿಶ್ಲೇಷಿಸುತ್ತಾರೆ. ವಿವರಣಾತ್ಮಕ ಕಥೆಯನ್ನು ವಿಮರ್ಶಿಸುವ ಲೇಖಕರು ಅದರಲ್ಲಿರುವ ಮಹತ್ತರವಾದ

ಅಂಶಗಳನ್ನು ಹುಡುಕಿ ಅಭಿವ್ಯಕ್ತಿಸುವಲ್ಲಿ ಸಫಲರಾಗಿದ್ದಾರೆ.

"ಮುರಾವು" ಜಾನಪದ ಸಂಶೋಧನಾ ಹಾಗೂ ವಿಮರ್ಶಾ ಲೇಖನಗಳ ಒಂದು ಸಂಚಯ. ಈ ಕೃತಿಯಲ್ಲಿ ಎಂಟು ವಿದ್ವತ್ಪೂರ್ಣ ಸಂಶೋಧನಾ ಬರಹಗಳಿವೆ. ಮೊದಲ ಲೇಖನ 'ಮೂಡಲಪಾಯ ಯಕ್ಷಗಾನ'. ಗೀತ, ಕುಣಿತ ಮತ್ತು ಅಭಿನಯ ಇವುಗಳಿಂದ ಮುಪ್ಪುರಿಗೊಂಡ ಬಯಲಾಟದಲ್ಲಿ ಅಭಿನಯವೇ ಜೀವಾಳ. ಇಲ್ಲಿ ಎಲ್ಲಾ ಪಾತ್ರಗಳ ಪ್ರವೇಶ ಮತ್ತು ನಿರ್ಗಮನ ಕುಣಿತದ ಮೂಲಕವೆ. ಮೂಡಲಪಾಯದಲ್ಲಿ ಇದು ದಟ್ಟವಾಗಿ ಕಾಣುವ ಅಂಶವಾಗಿರುವುದರಿಂದ ಇದನ್ನು ಕುರಿತು ಸುದೀರ್ಘವಾದ ವಿಶ್ಲೇಷಣೆ ಇಲ್ಲಿದೆ. ಈ ಪ್ರಬಂಧದ ಪ್ರಮುಖ ಉದ್ದೇಶಗಳನ್ನು ಲೇಖಕರು ಈ ರೀತಿ ಪಟ್ಟಿ ಮಾಡಿದ್ದಾರೆ.

೧. ಮೂಡಲಪಾಯ ಯಕ್ಷಗಾನ ಕುಣಿತದ ಸ್ವರೂಪ ಹೆಜ್ಜೆಗಳ ವೈವಿಧ್ಯ ಮತ್ತು ಪರಿಣಾಮ.

೨. ಅಭಿನಯ ಸ್ವರೂಪ, ಮುದ್ರೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಸೂತ್ರ ಅಥವಾ ಪದ್ಧತಿಗಳಿವೆಯೆ?

೩. ಕುಣಿತ ಅಭಿನಯಗಳಿಗೆ ಸಂಬಂಧಿಸಿದಂತೆ ಇತರ ಪಾಯ ಪ್ರಕಾರಗಳೊಂದಿಗೆ ಏನಾದರೂ ಹೋಲಿಕೆ ವ್ಯತ್ಯಾಸಗಳಿವೆಯೇ?

– ಈ ಮೂರು ಅಂಶಗಳ ವಿಸ್ತೃತ ಚರ್ಚೆಯಿರುವುದನ್ನು ಈ ಲೇಖನದಲ್ಲಿ ಗುರುತಿಸಬಹುದು.

ಎರಡನೆಯ ಬರಹ, 'ಕನ್ನಡದಲ್ಲಿ ಜಾನಪದ ಮಹಾಪ್ರಬಂಧಗಳು'. ಕರ್ನಾಟಕದಲ್ಲಿ ಜಾನಪದ ಅಧ್ಯಯನ ಶಾಸ್ತ್ರೀಯವಾಗಿ ಆರಂಭಗೊಂಡಂದೀಚೆಗೆ ಹೊರಬಂದಿರುವ ಸಂಶೋಧನಾ ಪ್ರಬಂಧಗಳಲ್ಲಿ, ಪ್ರಕಟಗೊಂಡ ಒಂಬತ್ತು ಸಂಶೋಧನಾ ಪ್ರಬಂಧಗಳನ್ನು

ಈ ಲೇಖನದಲ್ಲಿ ಪರಿಶೀಲನೆಗೆ ಒಳಪಡಿಸಿದ್ದಾರೆ. ಅವುಗಳು ಇಂತಿವೆ.

೧. ಕನ್ನಡ ಜಾನಪದ ಗೀತೆಗಳು (೧೯೬೩) ಡಾ. ಬಿ.ಎಸ್.ಗದ್ದಗಿ ಮಠ.

೨. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು (೧೯೭೯) ಡಾ.ಜೀಶಂಪ.

೩. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ (೧೯೮೦) ಡಾ.ಡಿ.ಕೆ.ರಾಜೆಂದ್ರ.

೪. ಕನ್ನಡ ಜನಪದ ಕಥೆಗಳು (೧೯೮೨) ಡಾ.ಕೆ. ಆರ್.ಸಂಧ್ಯಾರೆಡ್ಡಿ.

೫. ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ (೧೯೮೨) ಡಾ. ನಂ.ತಪಸ್ವೀಕುಮಾರ್

೬. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು (೧೯೮೨) ಡಾ. ತೀ.ನಂ.ಶಂಕರನಾರಾಯಣ.

೭. ಉತ್ತರ ಕರ್ನಾಟಕದ ಬಯಲಾಟಗಳು (೧೯೮೩) ಡಾ.ಬಸವರಾಜ ಮಲಶೆಟ್ಟಿ.

೮. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ (೧೯೮೫) ಡಾ. ದೇವೇಂದ್ರ ಕುಮಾರ ಹಕಾರಿ.

೯. ಕಾರವಾರ ಜಿಲ್ಲೆಯ ಜನಪದ ಗೀತೆಗಳು (೧೯೮೨) ಡಾ.ಎನ್.ಆರ್.ನಾಯಕ

ಈ ಮೇಲಿನ ಸಂಶೋಧನ ಪ್ರಬಂಧಗಳ ಒಟ್ಟು ನೋಟವನ್ನು ಈ ಲೇಖನದಲ್ಲಿ ಚರ್ಚಿಸಿರುವುದನ್ನು ಕಾಣಬಹುದು. ಅಲ್ಲದೆ, ಅಪ್ರಕಟಿತ ಸಂಶೋಧನ ಪ್ರಬಂಧಗಳನ್ನು ಸಹ ಪಟ್ಟಿ ಮಾಡಿರುವುದನ್ನು

ಗಮನಿಸಬಹುದು.

'ಮಾಟ-ಮಂತ್ರ-ಮೋಡಿ' ಮೂರನೆಯ ಲೇಖನ. ಜನಪದರಲ್ಲಿ ಬಳಕೆಯಲ್ಲಿರುವ ಮಾಟ-ಮಂತ್ರ-ಮೋಡಿಗಳನ್ನು ಧಾರ್ಮಿಕವಾಗಿ, ವೈಜ್ಞಾನಿಕವಾಗಿ, ಮನಃಶಾಸ್ತ್ರೀಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ಮಾಟ-ಮಂತ್ರಗಳು ರಹಸ್ಯ ಮಾರ್ಗಗಳಾಗಿರುವಂತೆಯೇ ಹಿಂಸಾಮಾರ್ಗಗಳೂ ಹೌದು. ಹಾಗೆಯೇ ಮೋಡಿಯೂ ಒಂದು ಕಾಲಕ್ಕೆ ಭಯವನ್ನು ಹುಟ್ಟಿಸುವ ಅದ್ಭುತ, ಚಮತ್ಕಾರಯುಕ್ತವಾದ ವಿದ್ಯೆ ಎಂದು ಗುರುತಿಸುತ್ತಾ ಇವುಗಳ ಸಾಧಕ-ಬಾಧಕಗಳನ್ನು ಸುದೀರ್ಘವಾಗಿ ವಿಮರ್ಶಿಸಿರುವುದನ್ನು ಕಾಣಬಹುದು. 'ಮಂಟೇಸ್ವಾಮಿ ಕಾವ್ಯ: ಒಂದು ನೋಟ' ಮತ್ತೊಂದು ಲೇಖನ. ಜನಪದ ಮಹಾಕಾವ್ಯವಾದ ಇದು ತುಂಬಾ ವಿಸ್ತಾರವಾದ ಗಂಭೀರ ಕಾವ್ಯ. ವೃತ್ತಿ ಗಾಯಕರಾದ ನೀಲಗಾರರು ಈ ಕಾವ್ಯವನ್ನು ಹಾಡುತ್ತಾರೆ. ಇವರನ್ನು ಮಂಟೇದೇವರು, ಮಂಟೇದಯ್ಯ, ಮಂಟೇಸ್ವಾಮಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ನೀಲಗಾರರು ಮಂಟೇಸ್ವಾಮಿಯ ಶಿಷ್ಯಂದಿರಾದ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿಯವರನ್ನು ಕುರಿತು ಹಾಡುತ್ತಾರೆ. ಸುದೀರ್ಘವಾದ ಈ ಕಾವ್ಯವನ್ನು ಸಂಕ್ಷೇಪಿಸಿ ಕಥೆಯ ಆಶಯಕ್ಕೆ ಭಂಗ ಬರದಂತೆ ಪೂರಕ ಪದ್ಯಗಳನ್ನು ಉದಾಹರಿಸಿ, ಅಲ್ಲಿಯ ಪಾತ್ರಗಳನ್ನು ವಿಶ್ಲೇಷಿಸಿರುವುದನ್ನು ಕಾಣಬಹುದು. ಮಂಟೇಸ್ವಾಮಿ ಕಾವ್ಯ ರೋಚಕ ಸನ್ನಿವೇಶಗಳಿಂದ, ಅದ್ಭುತ ವರ್ಣನೆಗಳಿಂದ, ಉನ್ನತ ವ್ಯಕ್ತಿತ್ವಗಳಿಂದ ಕೂಡಿದ್ದು ಆಕರ್ಷಕವಾಗಿರುವುದಷ್ಟೇ ಅಲ್ಲದೆ, ಭವ್ಯತೆಯ ದರ್ಶನವನ್ನೀಯುತ್ತದೆ ಎಂದು ಲೇಖಕರು ಈ ಕಾವ್ಯ ಸತ್ವವನ್ನು ಗುರುತಿಸುತ್ತಾರೆ.

'ಕರ್ನಾಟಕ ಕಲಾ ಪರಂಪರೆಯಲ್ಲಿ ಜನಪದ ಕಲೆಗಳು' ಲೇಖನದಲ್ಲಿ ಜನಪದ ಕಲೆಗಳು ಶಿಷ್ಟ ಅಥವಾ ಇನ್ನಿತರ ಕಲೆಗಳಿಗಿಂತ ತೀರಾ ಭಿನ್ನ ಎನ್ನುವಂತೆ ತೋರಿದರೂ ಅವುಗಳಿಗಿಂತ ಕಡಿಮೆಯೆನಿಸಿದ ಅದ್ಭುತ ಕಲಾಪ್ರತಿಭೆಯನ್ನು ಹೊಂದಿವೆ ಎಂಬುದನ್ನು ಪ್ರತಿಪಾದಿಸುತ್ತಾರೆ.

ಕರ್ನಾಟಕ ಜನಪದ ಕಲೆಗಳನ್ನು ಸಮೀಕ್ಷಿಸುವಾಗ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕೊಡಗು ಎಂದು ಪ್ರಾದೇಶಿಕವಾಗಿ ಐದು ಭಾಗಗಳಾಗಿ ವಿಂಗಡಿಸಿ ಜನಪದ ಕಲೆಗಳ ಹಿನ್ನೆಲೆಯಲ್ಲಿ ಆಯಾ ಭಾಗದ ಸಾಂಸ್ಕೃತಿಕ ಹಿನ್ನೆಲೆಯನ್ನು, ಭೌಗೋಳಿಕ ವೈಶಿಷ್ಟ್ಯವನ್ನು ಸ್ಪಷ್ಟಪಡಿಸುತ್ತಾರೆ. ಎಲ್ಲಾ ಭಾಗದ ಕಲೆಗಳನ್ನು ಜನಪದ ನೃತ್ಯಗಳು ಜನಪದ ನೃತ್ಯ ನಾಟಕಗಳು, ಜನಪದ ಮೇಳಗಳು, ಇತರ ಜನಪದ ಕಲೆಗಳೆಂದು ವಿಂಗಡಿಸಿ, ವಿಮರ್ಶಾತ್ಮಕವಾಗಿ ಪರಿಶೀಲಿಸಿ ಅವುಗಳ ವಿಶೇಷತೆಯನ್ನು ಗುರುತಿಸಿರುವುದನ್ನು ಕಾಣಬಹುದು.

'ಜನಪದ ರಂಗಭೂಮಿ ಮತ್ತು ಅದರ ಕೆಲವು ವಿಚಾರಗಳು' ಎಂಬುದರಲ್ಲಿ ಜನಪದ ರಂಗಭೂಮಿಯ ಇತಿಹಾಸ, ಬೆಳೆದುಬಂದ ಬಗೆಯನ್ನು ಚರ್ಚಿಸಿದ್ದಾರೆ. ವೈವಿಧ್ಯಪೂರ್ಣವೂ, ವೈಶಿಷ್ಟ್ಯಪೂರ್ಣವೂ ಆದ ಜನಪದ ರಂಗಭೂಮಿಯನ್ನು ಎರಡು ವಿಧಗಳಲ್ಲಿ ವಿಂಗಡಿಸುತ್ತಾರೆ. 'ಮಾನವ ರಂಗಭೂಮಿ' ಮತ್ತು 'ಗೊಂಬೆ ರಂಗಭೂಮಿ' ಎಂದು ವಿಂಗಡಿಸಿ ಮತ್ತೆ ಅವುಗಳಲ್ಲಿ ಒಳ ವಿಭಾಗಗಳನ್ನು ಗುರುತಿಸಿ, ಈ ರಂಗಭೂಮಿಗಳಲ್ಲಿ ಕಾಣಿಸಿಕೊಳ್ಳುವ ಕಲೆಗಳ ವೈಶಿಷ್ಟ್ಯವನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಕನ್ನಡ ಭಾಷೆ – ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕ್ಕೆ ದುಡಿದ ಮಹನೀಯರುಗಳಲ್ಲಿ ಒಬ್ಬರಾದ ಎಂ.ಎಲ್.ಶೀಕಂಠೇಗೌಡರ ಅಸಾಧಾರಣ ಪ್ರತಿಭೆಯ ಬಗ್ಗೆ ಬೆಳಕು ಚೆಲ್ಲುವ ಈ ಕೃತಿಯ ಮತ್ತೊಂದು ಬರಹ 'ಶ್ರೀಕಂಠೇಶಗೌಡರ ಜಾನಪದ ಕೊಡುಗೆ'. ನಾಟಕಕಾರರಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಕವಿಗಳಾಗಿ, ಜೀವನಚರಿತ್ರಕಾರರಾಗಿ ಹಾಗೂ ಭಾಷಾಂತರಕಾರರಾಗಿ ಕೀರ್ತಿ ಗಳಿಸಿರುವಂತೆಯೇ ಜಾನಪದ ಸಂಗ್ರಾಹಕರಾಗಿಯೂ ಹೆಸರುವಾಸಿಯಾಗಿರುವ ಅವರ ಸಮಗ್ರ ಕೃತಿಗಳನ್ನು ಪರಿಶೀಲಿಸಿ, ಅವರು ಬಳಸುವ ಭಾಷೆಯಲ್ಲಿ, ನುಡಿಗಟ್ಟುಗಳಲ್ಲಿ, ಗಾದೆಮಾತುಗಳಲ್ಲಿ ಹಾಗೂ ಸನ್ನಿವೇಶ ಚಿತ್ರಣ ಸಂದರ್ಭಗಳಲ್ಲಿ ಜಾನಪದದ ಸತ್ವ

ಧಾರಾಳವಾಗಿ ಕಂಡುಬರುವುದನ್ನು ಗುರುತಿಸುತ್ತಾರೆ. ಆದಿವಾಸಿ ಜಾನಪದ, ಗ್ರಾಮೀಣ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು ಇವುಗಳನ್ನು ಕುರಿತ ಕೃತಿಗಳು ಹಾಗೂ ಜಾನಪದ ವಿದ್ವಾಂಸರುಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

ಡಿ.ಕೆ.ರಾಜೇಂದ್ರ ಅವರು ಈ ಕೃತಿಯನ್ನು ಅವಿರತ ಶ್ರಮದಿಂದ ಕ್ಷೇತ್ರಕಾರ್ಯ ನಡೆಸಿ, ವಿಷಯ ಸಂಗ್ರಹಿಸಿ, ಕ್ರಮಬದ್ಧವೂ ಶಾಸ್ತ್ರೀಯವೂ ಆದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ಜನಪದ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಡಿ.ಕೆ.ರಾಜೇಂದ್ರ ಅವರ ಮಹತ್ವಪೂರ್ಣವಾದ ಮತ್ತೊಂದು ಕೃತಿ **'ಜಾನಪದ: ಕೆಲವು ಗ್ರಹಿಕೆಗಳು'**. ಈ ಕೃತಿಯಲ್ಲಿ ಹನ್ನೊಂದು ಲೇಖನಗಳಿವೆ. ಜನಪದ ಸಾಹಿತ್ಯದಲ್ಲಿರುವ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ವಿವರಗಳನ್ನು ಗ್ರಹಿಸಿ, ಅದರ ಮೌಖಿಕ ಅಭಿವ್ಯಕ್ತಿಯ ಗುಣಗಳನ್ನು ತಿಳಿಸಿದ್ದಾರೆ. ಬಯಲಾಟದ ಪ್ರಾಚೀನತೆ, ಮರುಚಿಂತನೆ, ಜನಪದ ಕಥೆಗಳ ಸಾಮಾಜಿಕ ಅಧ್ಯಯನ, ಪ್ರಾಚೀನ ಗದ್ಯ ಗ್ರಂಥಗಳಲ್ಲಿ ಜಾನಪದ ಅಂಶಗಳು, ಜನಪದ ಸಾಹಿತ್ಯ ಮತ್ತು ನಾಡಹಬ್ಬ ನವರಾತ್ರಿ, ಪಾರ್ತಿಸುಬ್ಬನ ಯಕ್ಷಗಾನ ಹಾಗೂ ವಸ್ತುವಿನ್ಯಾಸ, ಕರ್ನಾಟಕದಲ್ಲಿ ಜಾನಪದ ಪತ್ರಿಕೆಗಳು ಮತ್ತು ವೈಚಾರಿಕ ಹಿನ್ನೆಲೆ ಮುಂತಾದ ಲೇಖನಗಳಲ್ಲಿ ಲೇಖಕರ ಚಿಂತನೆಗಳು ವಾಸ್ತವ ನೆಲೆಯಲ್ಲಿ ಮೂಡಿಬಂದಿರುವುದನ್ನು ಕಾಣಬಹುದು. ಇಲ್ಲಿ ಜಾನಪದ ನಡೆದುಬಂದ ದಾರಿ, ಅದರ ಹಿನ್ನೋಟ–ಮುನ್ನೋಟಗಳನ್ನು, ಆಗಬೇಕಾಗಿರುವ ಕಾರ್ಯವೈಖರಿಗಳನ್ನು ಚರ್ಚಿಸಿದ್ದಾರೆ. ಜಾನಪದ ಪರಿಕಲ್ಪನೆಗಳಾದ ಸಸ್ಯ ಜಾನಪದ, ಗೋಡೆ ಜಾನಪದ, ಆಕಾಶ ಜಾನಪದ, ಪ್ರಾಣಿ ಜಾನಪದ, ಪರಿಸರ ಜಾನಪದ, ಲಿಖಿತ ಹಾಗೂ ಮೌಖಿಕ ಜಾನಪದಗಳನ್ನು ಕುರಿತಂತೆ ಬಹಳಷ್ಟು ಕಾರ್ಯ ಆಗಿಲ್ಲವೆಂದು ವಿಷಾದಿಸುತ್ತಾರೆ.

ಡಿ.ಕೆ.ರಾಜೇಂದ್ರ ಅವರ ಮತ್ತೊಂದು ಕೃತಿ **'ಜಾನಪದ-ಶಿಷ್ಟಪದ'**. ಈ ಕೃತಿ ಕುರಿತು ಲೇಖಕರು 'ಜಾನಪದ ಮೈಗೆ ಹೊಕ್ಕಿದ್ದಾದರೆ, ಶಿಷ್ಟಪದ ಕಲಿಕೆಯಿಂದ ಮನಹೊಕ್ಕಿದ್ದು. ಹಾಗಾಗಿ ಮೈಮನಗಳ ಅನ್ಯೋನ್ಯ ಸಂಬಂಧದಲ್ಲಿ ಹೊರಹೊಮ್ಮಿದ ಕೆಲವೊಂದು ವಿಚಾರಗಳು ಇಲ್ಲಿ ಬಿತ್ತರಗೊಂಡಿವೆ. ಎಷ್ಟೇ ದೊಡ್ಡ ಕವಿಯಾದರೂ ಅವನ ಕಾಲುಗಳು ಈ ನೆಲದಿಂದ ದೂರ ಸರಿದು ನಿಲ್ಲಲು ಸಾಧ್ಯವಿಲ್ಲ. ಹಾಗಾದರೆ ಅವನು ಕೆಲವೊಂದು ಮೂಲಭೂತ ವಿಚಾರಗಳಿಂದ ವಂಚಿತನಾದಂತೆಯೇ. ಹೂವು ಪುಷ್ಟಿಗೊಳ್ಳಬೇಕಾದರೆ ಬೇರು ಸಾಕಷ್ಟು ಆಳಕ್ಕೆ ಬೇರು ಬಿಟ್ಟು ಗಟ್ಟಿಗೊಂಡಿರಬೇಕಾಗುತ್ತದೆ. ಜಾನಪದ-ಶಿಷ್ಟಪದಗಳ ಸಂಬಂಧ ಅಂತಹುದು' ಎಂದು ಜಾನಪದ-ಶಿಷ್ಟಪದ ಸಂಬಂಧ ಕುರಿತು ನಿರ್ವಚಿಸಿದ್ದಾರೆ. ಇದೊಂದು ವಿಷಯ ವೈವಿಧ್ಯತೆಯುಳ್ಳ ಇಪ್ಪತ್ಮೂರು ವಿಮರ್ಶಾ ಲೇಖನಗಳನ್ನೊಳಗೊಂಡ ಬೃಹತ್ ಕೃತಿ.

ಮೊದಲ ಲೇಖನ 'ಜನಪದ ಕಥೆಗಳು: ಒಂದು ವಿಶ್ಲೇಷಣೆ'. ಜನಪದ ಸಾಹಿತ್ಯದಲ್ಲಿ ಪ್ರಾಚೀನವೂ, ಪ್ರಚಲಿತವೂ ಆದ ವಿಶಿಷ್ಟ ಪ್ರಕಾರವಾದ ಜನಪದ ಕಥೆಗಳ ವ್ಯಾಪಕ ಚರ್ಚೆ ಈ ಲೇಖನದಲ್ಲಿದೆ. ಮಾನವ ಸಂಸ್ಕೃತಿಯ ಎಲ್ಲಾ ಮುಖಗಳನ್ನು ಅನಾವರಣಗೊಳಿಸುವ ಶಕ್ತಿಯಿರುವ ಜನಪದ ಕಥೆಗಳ ಪೈಕಿ ಕೆಲವು ಪ್ರಸಿದ್ಧ ಕಥೆಗಳ ವೈಶಿಷ್ಟ್ಯವನ್ನು ವಿಶ್ಲೇಷಿಸಿದ್ದಾರೆ. ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡ ಸಮ್ಮಿಶ್ರಕಲೆ 'ಕರಪಾಲಮೇಳ' ಈ ಕೃತಿಯ ಎರಡನೆಯ ಲೇಖನ. ಸೋಲಿಗರು, ಕಾಡುಕುರುಬರು ಮತ್ತು ಜೇನುಕುರುಬರು, ಎರವರು, ಕೊಡಗಿನ ಪಣಿಯರು, ಮ್ಯಾಸಬೇಡರು, ಕಾಡುಗೊಲ್ಲರು ಮುಂತಾದ ಬುಡಕಟ್ಟು ಜನರ ಸಂಸ್ಕೃತಿ, ಬದುಕು, ವಿಶಿಷ್ಟ ರೀತಿ, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು, ಕಲೆ-ಸಾಹಿತ್ಯ ಮತ್ತು ಆ ಸಮಾಜದ ಕೆಲವು ಸಾಮಾನ್ಯ ಲಕ್ಷಣಗಳ ಚರ್ಚೆ 'ದಕ್ಷಿಣ ಕರ್ನಾಟಕದ ಬುಡಕಟ್ಟುಗಳು' ಎಂಬ ಮೂರನೆಯ ಲೇಖನದಲ್ಲಿದೆ. ಜನಪದ

ಸಂಸ್ಕೃತಿಯ ಸಂಕೇತವಾಗಿ, ಜನಪದ ಬದುಕಿನ ಕುರುಹುಗಳಾಗಿರುವ ಜನಪದ ಕಲೆಗಳ ವೈಶಿಷ್ಟ್ಯವನ್ನು ಕುರಿತ ಮತ್ತೊಂದು ಲೇಖನ 'ದಕ್ಷಿಣ ಕರ್ನಾಟಕದ ಜನಪದ ಚಿತ್ರಕಲೆಯ ವೈಶಿಷ್ಟ್ಯ'. ಕಥೆಗಳನ್ನು ಹೇಳುವ ಹಾಡ್ಗತೆಗಳ ಮೇಲೆ ಬೆಳಕು ಚೆಲ್ಲುವ, ಎಚ್.ಎಲ್.ನಾಗೇಗೌಡರು ೧೯೭೬ರಲ್ಲಿ ಸಂಪಾದಿಸಿ ಪ್ರಕಟಿಸಿದ 'ಪದವವೆ ನಮ್ಮ ಎದೆಯಲ್ಲಿ' ಕೃತಿಯ ಒಂದು ಭಾಗದ ವಿಶ್ಲೇಷಣೆ 'ಪದವವೆ ನಮ್ಮ ಎದೆಯಲ್ಲಿ – ಹಾಡ್ಗತೆಗಳು' ಲೇಖನದಲ್ಲಿದೆ. ಇದರಲ್ಲಿ ಜನಪದರ ವೈವಿಧ್ಯಮಯ ಬದುಕನ್ನು ಕುರಿತ ವೈಶಿಷ್ಟ್ಯಪೂರ್ಣ ನಿರೂಪಣೆಯಿರುವುದನ್ನು ಡಿ.ಕೆ. ರಾಜೇಂದ್ರ ಅವರು ಗುರುತಿಸುತ್ತಾರೆ.

'ಜಾನಪದ ಮಹಾಮತ್ಸ್ಯ' ಎಂದು ಖ್ಯಾತರಾದ ಡಾ.ಜೀ.ಶಂ.ಪ ಅವರ ವ್ಯಕ್ತಿತ್ವ ಮತ್ತು ಸಾಧನೆಯ ಬಗ್ಗೆ ಬೆಳಕು ಚೆಲ್ಲುವ ಮತ್ತೊಂದು ಲೇಖನ 'ಕರ್ನಾಟಕ ವೃತ್ತಿಗಾಯಕ ಸಂಶೋಧನೆ ಹಾಗೂ ಜೀಶಂಪ'. ಇದರಲ್ಲಿ ವೃತ್ತಿಗಾಯಕರನ್ನು ಕುರಿತು ಜೀಶಂಪ ಅವರ ಆಳವಾದ ಸಂಶೋಧನೆ ಹಾಗೂ ಜಾನಪದ ಕ್ಷೇತ್ರಕ್ಕೆ ಅವರ ಕೊಡುಗೆಗಳನ್ನು ತಲಸ್ಪರ್ಶಿಯಾಗಿ ಚರ್ಚಿಸಿದ್ದಾರೆ. ಜಾನಪದದ ವರ್ಣಮಯ ಲೋಕವನ್ನು ಬಣ್ಣಿಸಲು ಹುಟ್ಟಿಕೊಂಡ ಪತ್ರಿಕೆಗಳ ಬಗ್ಗೆ ಪರಿಚಯವಿರುವ ಲೇಖನ 'ಕರ್ನಾಟಕ ಜಾನಪದ ಪತ್ರಿಕೆಗಳು'. ಇದರಲ್ಲಿ 'ಇಂಡಿಯನ್ ಆಂಟಿಕ್ವಯರಿ' ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಅತ್ಯಂತ ಮಹತ್ವದ, ವಿವಿಧ ಬಗೆಯ ಲೇಖನಗಳನ್ನು, ಸಂಗ್ರಹಗಳನ್ನು ಒಳಗೊಂಡು ಪ್ರಕಟಗೊಳ್ಳುತ್ತಿದ್ದ ಪತ್ರಿಕೆ. ಕನ್ನಡ ಜಾನಪದ ಪತ್ರಿಕೆಗಳಾದ ೧.ಜಾನಪದ, ೨.ಜಾನಪದ ಜಗತ್ತು, ೩. ಮೂಡಲಪಾಯ, ೪.ಜಾನಪದ ಗಂಗೋತ್ರಿ ಹಾಗೆಯೇ ಇಂಗ್ಲಿಷಿನಲ್ಲಿ ಉಳಿದ ಭಾಷಾ ಜಾನಪದ ವಿಚಾರಗಳ ಜೊತೆಗೆ ಕನ್ನಡ ಜಾನಪದ ವಿಷಯವನ್ನು ಹೆಚ್ಚಾಗಿ ಪ್ರಕಟಮಾಡುತ್ತಿದ್ದ ಪತ್ರಿಕೆಗಳಾದ.

1. Karnataka Folklore news Letter
2. Journal of Indian Folklorists

3. Prasaranga

4. FFI news Bulletin

ಪತ್ರಿಕೆಗಳ ಹುಟ್ಟು, ಬೆಳವಣಿಗೆ, ಸ್ವರೂಪ ಕುರಿತ ವಿವರಣಾತ್ಮಕ ವಿಶ್ಲೇಷಣೆಯಿರುವುದನ್ನು ಕಾಣಬಹುದು. ಜನಪದರ ಸಹಸ್ರನಾಮಗಳ ಶಕ್ತಿದೇವತೆ 'ಚಾಮಾಯಿ' ಈ ಕೃತಿಯ ಮತ್ತೊಂದು ಲೇಖನ. ಆದಿಶಕ್ತಿಯ ಪ್ರಸ್ತಾಪ ಶಿಷ್ಟಪುರಾಣ ಮತ್ತು ಜನಪದ ಪುರಾಣಗಳಲ್ಲಿ ಹೇಗೆ ಮೂಡಿಬಂದಿದೆ ಹಾಗೂ ಜನಪದರ ಭಾವನೆಗಳಲ್ಲಿ 'ಚಾಮಾಯಿ' ದೇವತೆಯ ಬಗ್ಗೆ ಇರುವ ನಂಬಿಕೆಗಳನ್ನು ಕೂಲಂಕೂಷವಾಗಿ ಚಿತ್ರಿಸುವ ಲೇಖನ ಇದಾಗಿದೆ.

ಶ್ರೀಮತಿ ನಗುವನಹಳ್ಳಿ.ಪಿ.ರತ್ನ ಅವರ ಕೃತಿ 'ಜಾನಪದ ಸೋಪಾನ'. ಜಾನಪದದ ಹಲವು ಮುಖಗಳನ್ನು ಪರಿಚಯಿಸುವ ಇಲ್ಲಿಯ ಲೇಖನಗಳಲ್ಲಿನ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಲೇಖಕರು ಅತ್ಯಂತ ಸಮರ್ಪಕವಾಗಿ ಚರ್ಚಿಸಿರುವುದನ್ನು ಕಾಣಬಹುದು.

ಶ್ರೀಮತಿ ವೈ.ಸಿ.ಭಾನುಮತಿ ಅವರ 'ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ' ಎಂಬ ಸಂಶೋಧನಾ ಕೃತಿಯನ್ನು 'ಮಲೆನಾಡು ಶೈವ ಒಕ್ಕಲಿಗರು' ಎಂಬ ಶೀರ್ಷಿಕೆಯೊಡನೆ ಅಲ್ಲಿನ ಎಲ್ಲಾ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಚಿತ್ರಿಸಿ ವಿಶ್ಲೇಷಣೆ ಮಾಡಿದ್ದಾರೆ. ಮಲೆನಾಡು ಶೈವ ಒಕ್ಕಲಿಗರ ವೈಶಿಷ್ಟ್ಯಗಳನ್ನು ಸಂಶೋಧಕರು ಗುರುತಿಸಿರುವುದನ್ನು ಪ್ರಸ್ತಾಪಿಸುತ್ತಾ ಕೃತಿಯ ಮೌಲ್ಯದ ಜೊತೆಗೆ ಜಾನಪದ ಸಂಶೋಧನಾ ಕ್ಷೇತ್ರಕ್ಕೆ ಆ ಕೃತಿಯ ಕೊಡುಗೆ ಏನು ಎಂಬುದನ್ನು ತಿಳಿಸುವ ಪ್ರಯತ್ನ ಈ ಲೇಖನದಲ್ಲಿದೆ. ಜನಪದ ರಾಮಾಯಣಗಳನ್ನು ಶ್ರೀ ರಾಮಾಯಣದರ್ಶನಂ ಮಹಾಕಾವ್ಯದೊಂದಿಗೆ ಹೋಲಿಸಿ, ಮೂಲಭೂತವಾಗಿ ಇರುವ ಹಲವು ವ್ಯತ್ಯಾಸಗಳನ್ನು ಗುರುತಿಸಿ, ತೌಲನಿಕವಾಗಿ ಪರಿಶೀಲಿಸುವ

ವಿಧಾನ 'ಶ್ರೀ ರಾಮಾಯಣ ದರ್ಶನಂ ಮತ್ತು ಜಾನಪದ ರಾಮಾಯಣಗಳು' ಎಂಬ ಲೇಖನದಲ್ಲಿದೆ. 'ವಿಶ್ವಮಾನವ ಸಂದೇಶ' ಕುವೆಂಪು ಅವರು ಈ ಜಗತ್ತಿಗೆ ಕೊಟ್ಟ ವಿಶಿಷ್ಟ ಕೊಡುಗೆ. ಅವರ ಬಹುಕಾಲದ ಸಾಧನೆ–ಸಿದ್ಧಿಯ ಫಲ. ವಿಶಾಲ ಮನಸ್ಸಿನ, ವಿಶಾಲ ಭಾವನೆಯ ತಪಸಿದ್ಧಿ. ಇಂತಹ ವಿಶ್ವಮಾನದ ಪ್ರಜ್ಞೆಯ ಸ್ವರೂಪ ಕುರಿತ ವಿಶ್ಲೇಷಣೆ 'ಶ್ರೀರಾಮಾಯಣದರ್ಶನಂನಲ್ಲಿ ವಿಶ್ವಮಾನವ ಪ್ರಜ್ಞೆ' ಎಂಬ ಲೇಖನದಲ್ಲಿದೆ. ಸಾಹಿತ್ಯ ಮತ್ತು ಮನೋವಿಜ್ಞಾನಕ್ಕೆ ಇರುವ ಸಂಬಂಧ ನಿಗೂಢವಾದದ್ದು. ಸೂಕ್ಷ್ಮವಾದದು. ಸಾಹಿತ್ಯ ಬುದುಕಿಗೆ ಸಂಬಂಧಿಸಿದ್ದು. ಮನೋವಿಜ್ಞಾನ ಮಾನಸಿಕ ಕ್ರಿಯೆ ಪ್ರತಿಕ್ರಿಯೆಗೆ ಸಂಬಂಧಿಸಿದ್ದು. ಸಾಹಿತ್ಯಿಕ ಕೃತಿಯೊಂದು ನಿರ್ಮಾಣವಾಗುವುದು ಈ ಮಾನಸಿಕ ಕ್ರಿಯೆ ಹಾಗೂ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಎಂದು ತಿಳಿಸುತ್ತಾ ಅವುಗಳ ಸಂಬಂಧಗಳನ್ನು ವಿಶ್ಲೇಷಿಸುವ ಲೇಖನ 'ಸಾಹಿತ್ಯ ಮತ್ತು ಮನಃಶಕ್ತಿ'. ದಾಸಪಂಥದಲ್ಲಿ ಪ್ರಮುಖರಾದ ಕನಕದಾಸರ ಸ್ಥಾನಮಾನದ ಜೊತೆಗೆ ಅವರ ಕೀರ್ತನೆಗಳು ಹಾಗೂ ಸಾಹಿತ್ಯ ಕೃತಿಗಳನ್ನು ಕುರಿತು ಸುದೀರ್ಘ ವಿವೇಚನೆ 'ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ' ಎನ್ನುವ ಲೇಖನದಲ್ಲಿದೆ. ಮಹಾಕವಿ ಕುವೆಂಪು ಅವರು ರಚಿಸಿರುವ ಎರಡು ಅಪೂರ್ವ ಚೇತನಗಳ ಜೀವನ ಚಿತ್ರಣದ ಸಮಗ್ರ ಪರಿಶೀಲನೆ 'ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ' ಎಂಬ ಲೇಖನದಲ್ಲಿದೆ.

'ಆನಂದಕಂದ : ಮಾತನಾಡುವ ಕಲ್ಲು' ಎನ್ನುವ ಲೇಖನದಲ್ಲಿ ೧೯೪೪ರಲ್ಲಿ ಪ್ರಕಟವಾದ, ಜನಪದ ಸಂಸ್ಕೃತಿಯ ಹಾಗೂ ಜನಪದ ಬದುಕಿನ ಹಲವು ಮುಖಗಳನ್ನು ತೆರೆದು ತೋರುವ ವಿಶಿಷ್ಟ ಕೃತಿಯಾದ 'ಮಾತನಾಡುವ ಕಲ್ಲು' ಕೃತಿಯಲ್ಲಿರುವ ಎಂಟು ಲೇಖನಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕಾವ್ಯಜಗತ್ತಿನೆರಡು ಅದ್ಭುತ ಚೇತನಗಳಾದ ಕುವೆಂಪು ಮತ್ತು ಬೇಂದ್ರೆ ಅವರ ದೃಷ್ಟಿ ಧೋರಣೆಯನ್ನು

ತೌಲನಿಕವಾಗಿ ವಿಶ್ಲೇಷಿಸಿರುವ ಬಗೆ 'ಬೇಂದ್ರೆ-ಒಂದು ಟಿಪ್ಪಣಿ'ಯಲ್ಲಿದೆ. ಕುವೆಂಪು, ಬೆಂದ್ರೆ ಇಬ್ಬರದ್ದೂ ಅಸಾಧಾರಣ ಪ್ರತಿಭೆ. ಆದರೆ ಅವರುಗಳ ಕಾವ್ಯದ ಸತ್ವವಾಗಲೀ, ಸ್ವರೂಪವಾಗಲೀ ಭಿನ್ನತೆಯಿಂದ ಕೂಡಿದ್ದು ಎನ್ನುತ್ತಾ, ಅವರು ಬಂದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರ ತದ್ವಿರುದ್ಧವಾದ ಸ್ಥಿತಿಯವು ಎಂಬುದನ್ನು ಗುರುತಿಸುತ್ತಾರೆ. ಶ್ರೀ ಸಾಮಾನ್ಯನ ಬಗ್ಗೆ ಎಚ್ಚರ ಹಾಗೂ ಈ ನೆಲದ ಜನಮನದ ಸುಪ್ತ ಬಯಕೆಗಳಿಗೆ ಬಾಯಿಯಾದ ಕುವೆಂಪು ಅವರು ಬೇಂದ್ರೆ ಅವರಂತೆ ಕಲಾತ್ಮಕತೆಯ ಕಡೆಗೆ ಹೆಚ್ಚು ಗಮನಹರಿಸದೆ, ವೈಚಾರಿಕ ಕ್ರಾಂತಿಯ ಕಡೆಗೆ ಬಳಸಿರುವುದನ್ನು ಗುರುತಿಸುತ್ತಾರೆ. ನವೋದಯ ಕಾಲದ ಬೇಂದ್ರೆ ಮತ್ತು ಕುವೆಂಪು ಅವರನ್ನು ಒಟ್ಟೊಟ್ಟಿಗಿಟ್ಟು ನೋಡುವಾಗ ಕವಿಯ ಮನೋಧರ್ಮವನ್ನು, ಸಾಮಾಜಿಕ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕೇ ಹೊರತು, ಪಕ್ಷಪಾತ ಧೋರಣೆ ಸಲ್ಲದು ಎಂಬ ಸಂದೇಶವನ್ನು ಕೊಟ್ಟಿರುವುದನ್ನು ಕಾಣಬಹುದು.

ಕನ್ನಡ ನಾಡು ನುಡಿಗಾಗಿ ಹೋರಾಡುತ್ತಿರುವ ದಿವ್ಯಚೇತನ, ಶ್ರೇಷ್ಠಮಟ್ಟದ ಹೋರಾಟಗಾರರೂ, ಪರಿಶಿಷ್ಟವರ್ಗದ ಸಾಹಿತಿಗಳೂ, ಉತ್ತಮ ಮಟ್ಟದ ಭಾಷಾಂತರಕಾರರೂ ಆದ ಪ್ರೊ.ದೇಜಗೌ ಅವರ 'ಮುನ್ನುಡಿಗಳು' 'ರಾಷ್ಟ್ರಕವಿ ಕುವೆಂಪು' ಹಾಗೂ 'ಬೆರಕೆಸೊಪ್ಪು' ಕೃತಿಗಳ ತಲಸ್ಪರ್ಶಿ ವಿಮರ್ಶೆಯುಳ್ಳ ಲೇಖನ "ದೇಜಗೌ ಕೃತಿ ಸಮೀಕ್ಷೆ" ನಲವತ್ತೊಂಬತ್ತು ಲೇಖಕ ಮಿತ್ರರುಗಳಿಗೆ ಬರೆದ ಮುನ್ನುಡಿಗಳ ಸಮಾವೇಶ 'ಮುನ್ನುಡಿ'ಕೃತಿಯಲ್ಲಿದೆ. ಲೇಖಕರು ಈ ಕೃತಿಯ ಬಗ್ಗೆ ಸಮೀಕ್ಷಿಸುತ್ತಾ ಒಂದು ಕೃತಿಗೆ ಮುನ್ನುಡಿ, ಭಾರತೀಯ ಸ್ತ್ರೀಗೆ ಮೂಗುತಿಯಂತೆ, ಅರಿಸಿನ ಕುಂಕುಮದಂತೆ, ಅದು ಸೌಂದರ್ಯವರ್ಧಕವೂ ಹೌದು, ಶುಭದ ಸಂಕೇತವೂ ಹೌದು ಎನ್ನುತ್ತಾ ಮುನ್ನುಡಿಯ ಮಹತ್ವದ ಜೊತೆಗೆ ದೇಜಗೌ ಅವರ ಅಪಾರ ವಿದ್ವತ್ತನ್ನು ಅನಾವರಣಗೊಳಿಸಿದ್ದಾರೆ. 'ರಾಷ್ಟ್ರಕವಿ ಕುವೆಂಪು'ಕೃತಿ ದೇಜಗೌ ಅವರು

ರಚಿಸಿರುವ ಜೀವನ ಚರಿತ್ರೆ. ಮಹಾಕವಿಯೊಬ್ಬರ ಜೀವನ ಚಿತ್ರವನ್ನು ಕೆಚ್ಚೆದೆಯಿಂದ ಚಿತ್ರಿಸುವ ಸಾಹಸ ದೇಜಗೌ ಅಂತಹವರಿಂದ ಸಾಧ್ಯ ಎನ್ನುತ್ತಾ, ಒಂಬತ್ತು ಮುಖ್ಯ ಘಟ್ಟಗಳಾಗಿ ಚಿತ್ರಿತವಾಗಿರುವ ಈ ಕೃತಿಯ ಜೀವಂತ ಚಿತ್ರಣದ ವಿಶ್ಲೇಷಣೆಯಿರುವುದನ್ನು ಗಮನಿಸಬಹುದು. ಇದೇ ಲೇಖನದಲ್ಲಿ ದೇಜಗೌ ಅವರ 'ಬೆರಕೆಸೊಪ್ಪು' ಕೃತಿಯಲ್ಲಿರುವ ಐವತ್ತು ಬರಹಗಳ ಸಮಗ್ರ ವಿವೇಚನೆಯಿದೆ. ಸಾಹಿತ್ಯ, ಭಾಷೆ, ಶಿಕ್ಷಣ, ಆರೋಗ್ಯ, ಪ್ರಾಣಿ ಜೀವನ – ಹೀಗೆ ಹತ್ತಾರು ವಿಷಯಗಳ ಸ್ವತಂತ್ರ ಬರಹಗಳ ಜೊತೆಗೆ ಇಪ್ಪತ್ತೊಂದು ಅನುವಾದಿತ ಲೇಖನಗಳು ಈ ಕೃತಿಯಲ್ಲಿವೆ. ಇವುಗಳ ಸ್ಥೂಲ ನೋಟ ಇಲ್ಲಿದೆ. ವಿಚಾರ ವೈಭವಕ್ಕೆ ತಕ್ಕ ರಮ್ಯೋಜ್ವಲವಾದ ಶೈಲಿ ದೇಜಗೌ ಅವರಿಗೆ ಸಿದ್ಧಿಸಿದೆ ಎಂಬುದು ಡಿ.ಕೆ. ರಾಜೆಂದ್ರ ಅವರ ನಿಲುವು.

ವಿಮರ್ಶೆಯ ಆಯಾಮಗಳು ಹಾಗೂ ಕವಿ ಮತ್ತು ವಿಮರ್ಶಕರಿಗೆ ಸಾಹಿತ್ಯ ಜಗತ್ತಿನಲ್ಲಿರುವ ಸ್ಥಾನಮಾನಗಳ ಚರ್ಚೆಯ ಜೊತೆಗೆ ಜಯಲಕ್ಷ್ಮೀ ಸೀತಾಪುರ ಅವರ ವಿಶಿಷ್ಟ ಬಗೆಯ ವಿಮರ್ಶಾ ಸಂಕಲನವಾದ 'ನೋಟ' ಸಂಕಲನದ ಎಂಟು ಪ್ರಬಂಧಗಳನ್ನು ಔಚಿತ್ಯಪೂರ್ಣವಾಗಿ ವಿಮರ್ಶಿಸಿರುವುದನ್ನು 'ನೋಟ: ಒಂದು ಒಳನೋಟ' ಲೇಖನದಲ್ಲಿ ಕಾಣಬಹುದು. ಈ ಕೃತಿಯ ಕೊನೆಯ ಲೇಖನ 'ವಿಚಾರಶೀಲ ದೇಜಗೌ'. ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಕುಲಪತಿಗಳಾಗಿ ಕಾರ್ಯನಿರ್ವಹಿಸುವಲ್ಲಿ ತೋರಿದ ದಕ್ಷತೆ, ಶಿಸ್ತು ಸಂಯಮ, ಮಾಡಿದ ಚಿಂತನೆ, ಯೋಜನೆ ಮುಂತಾದ ವಿಷಯಗಳ ಬಗ್ಗೆ ದೇಜಗೌರವರಿಗಿರುವ ಕ್ರಿಯಾಶೀಲ ವ್ಯಕ್ತಿತ್ವವನ್ನು ಈ ಬರಹದಲ್ಲಿ ಲೇಖಕರು ಚಿತ್ರಿಸಿದ್ದಾರೆ. ಹೀಗೆ ಶಿಷ್ಟ ಸಾಹಿತ್ಯ ಹಾಗೂ ಜನಪದ ಸಾಹಿತ್ಯ ಕ್ಷೇತ್ರಗಳ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ಈ ಕೃತಿ ಬಹುಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಡಿ.ಕೆ.ರಾಜೇಂದ್ರ ಅವರ ಸಂಪಾದಿತ ಕೃತಿ **'ಕರಪಾಲಮೇಳ'**.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಮೊದಲಬಾರಿಗೆ ಯಥಾವತ್ತಾಗಿ ಕರಪಾಲ ಮೇಳದ ಸರ್ವ ವಿವರಗಳೂ ಸಮಗ್ರವಾಗಿ ಲಭ್ಯವಾಗುವಂತೆ ಸಂಪಾದಿಸಿಕೊಟ್ಟಿದ್ದಾರೆ. ಅಲ್ಲದೆ ಈ ಮೇಳದ ಸಾಹಿತ್ಯವನ್ನು ಯಥಾವತ್ತಾಗಿ ಪ್ರಕಟಿಸಿದ್ದಾರೆ. ಯಕ್ಷಗಾನ ಬಯಲಾಟದಂತೆ ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡ ಈ ಸಮ್ಮಿಶ್ರ ಕಲೆಯ ವೈಶಿಷ್ಟ್ಯವನ್ನು ಈ ಕೃತಿಯ ಆರಂಭದ ಮೂವತ್ತಾರು ಪುಟಗಳ ಸುದೀರ್ಘ 'ಪ್ರಸ್ತಾವನೆ'ಯಲ್ಲಿ ಗುರುತಿಸಿದ್ದಾರೆ. ಈ ಮೇಳದ ವ್ಯಾಪ್ತಿ, ಸಾಹಿತ್ಯ, ವೇಷಭೂಷಣಗಳು, ವಾದ್ಯ ಪರಿಕರಗಳ ಬಗ್ಗೆ ತಿಳಿಸುತ್ತಾ 'ಕರಪಾಲ' ಪದದ ಅರ್ಥವ್ಯಾಪ್ತಿಯನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಮುಖ್ಯವಾಗಿ ಈ ಕೃತಿಯಲ್ಲಿ ಕರಪಾಲದ ಕಥೆಗಳಾದ ಕಾಡುಸಿದ್ದಮ್ಮನ ಕಥೆ, ನೀಲಕಂಠ ರೂಪಾವತಿ, ಬಸವಕುಮಾರ – ಲೋಹಿತಕುಮಾರ ಕಥೆಗಳನ್ನು ಸಂಪಾದಿಸಿ, ಅವುಗಳ ಸಾಹಿತ್ಯಕ ಹಾಗೂ ಭಾಷಿಕ ವಿಶೇಷತೆಗಳನ್ನು ಚರ್ಚಿಸಿದ್ದಾರೆ. ವೈಜ್ಞಾನಿಕ ದೃಷ್ಟಿಕೋನದಿಂದ ಸಂಪಾದಿಸಿರುವ ಈ ಕೃತಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅನರ್ಘ್ಯ ರತ್ನವಾಗಿದೆ.

ಮಾನವನ ಬದುಕಿನ ಆರಂಭದಿಂದಲೂ ಸಾಮಾಜಿಕ ಧ್ಯೇಯಧೋರಣೆಗಳನ್ನು ರೂಪಿಸುವಲ್ಲಿ ಹಾಗೂ ಸಾಮಾಜಿಕ ಮೌಲ್ಯಗಳನ್ನು ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿರುವ, ನಂಬಿಕೆಗಳ ಮೇಲೆ ಬೆಳಕು ಚೆಲ್ಲುವ ಕೃತಿ **'ನಮ್ಮ ನಂಬಿಕೆಗಳು'**. ನಂಬಿಕೆಗಳಿಗೂ ಜನಪದರ ಬದುಕಿಗೂ ನಿಕಟವಾದ ಸಂಬಂಧವಿದೆ. ಜನಪದರ ಆಂತರಿಕ ಮನೋಭಾವವನ್ನು, ಅವರ ಮೂಲಸಂವೇದನೆ, ಸಂಸ್ಕೃತಿ, ಸಂಪ್ರದಾಯಗಳನ್ನು ಪರಿಚಯಿಸುವಲ್ಲಿ ನಂಬಿಕೆಗಳು ಮುಖ್ಯ ಸಾಧನಗಳಾಗಿವೆ. ಜೊತೆಗೆ ಕೆಲವು ನಂಬಿಕೆಗಳು ಜನರಲ್ಲಿ ಅತೀವವಾದ ಶ್ರದ್ಧೆಯ ಜೊತೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ಕೆಲವು ನಂಬಿಕೆಗಳು ವ್ಯಕ್ತಿಯನ್ನು ತೊಳಲಾಟಕ್ಕೆ ಒಳಗುಮಾಡಿ ಸಂದಿಗ್ಧತೆಗೆ ಒಡ್ಡುತ್ತವೆಂದು

ನಂಬಿಕೆಗಳ ಸ್ವರೂಪವನ್ನು ಡಿ.ಕೆ.ರಾಜೇಂದ್ರ ಚರ್ಚಿಸಿದ್ದಾರೆ. ನಂಬಿಕೆಗಳ ಬಗ್ಗೆ ಹುಟ್ಟಿಕೊಂಡಿರುವ ನಾಣ್ಣುಡಿಗಳನ್ನು ವಿಶ್ಲೇಷಿಸುತ್ತಾ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ ನಂಬಿಕೆಗಳೆಂದು ಮೂರು ವರ್ಗಗಳಾಗಿ ವಿಂಗಡಿಸಿ, ಕೆಲವು ನಂಬಿಕೆಗಳನ್ನು ಉದಾಹರಿಸಿ ವಿಶ್ಲೇಷಿಸಿದ್ದಾರೆ. ಎಲ್ಲಾ ನಂಬಿಕೆಗಳು ಕಲಿತವರು, ಕಲಿಯದವರು, ಹಳ್ಳಿಯವರು, ನಗರದವರು – ಹೀಗೆ ಸಾರ್ವತ್ರಿಕವಾಗಿ ಕಂಡುಬರುತ್ತವೆಂದು ಅವುಗಳ ವ್ಯಾಪ್ತಿಯ ಬಗ್ಗೆ ತಿಳಿಸುತ್ತಾ ಕನಸು, ಕಾಲ, ನಿದ್ರೆ, ಅಡಿಗೆ, ಊಟ, ಪ್ರಾಣಿ, ವ್ಯವಸಾಯ, ಪ್ರಕೃತಿ, ಹಬ್ಬ ಹರಿದಿನ, ಹುಟ್ಟು–ಸಾವು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಇರುವ ನೂರಾರು ನಂಬಿಕೆಗಳ ಸಾಧಕ–ಬಾಧಕಗಳನ್ನು ಚರ್ಚಿಸಿದ್ದಾರೆ. ವೈಜ್ಞಾನಿಕ ನಂಬಿಕೆ ಮತ್ತು ಅವೈಜ್ಞಾನಿಕ ನಂಬಿಕೆಗಳೆಂದು ಪ್ರಧಾನವಾಗಿ ವಿಂಗಡಿಸಿ, ಅವುಗಳ ಮಹತ್ವವನ್ನು ವಿಶ್ಲೇಷಿಸಿ, ಅವುಗಳಲ್ಲಿರುವ ಉತ್ತಮ ಕಾವ್ಯಗುಣಗಳನ್ನು ಗುರುತಿಸುತ್ತಾ, ಕೆಲವು ನಂಬಿಕೆಗಳಿಗೆ ಆಧುನಿಕತೆಯ ಸ್ಪರ್ಶ ಆಗಿರುವುದನ್ನು ಗುರುತಿಸಿದ್ದಾರೆ. ಇಂತಹ ವಿಶೇಷ ಗುಣಗಳುಳ್ಳ ನಂಬಿಕೆಗಳನ್ನು ನಿರ್ಲಕ್ಷಿಸಬಾರದೆಂಬ ಕಳಕಳಿ ಕೃತಿಯುದ್ದಕ್ಕೂ ಕಂಡು ಬರುವುದು ಗಮನಾರ್ಹವಾಗಿದೆ.

ಜನಪದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವ ರಾಜೇಂದ್ರ ಜನಪದ ಕಥಾಕ್ಷೇತ್ರದಲ್ಲೂ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಅವರ ಅವಿರತ ಕ್ಷೇತ್ರಕಾರ್ಯದ ಫಲವಾಗಿ **'ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳು'** ಮೂಡಿಬಂದಿದೆ. ಸಂಪಾದಿತ ಕೃತಿಯಾದ ಇದರ ಆರಂಭದಲ್ಲಿ ಜನಪದ ಕಥಾ ಸಾಹಿತ್ಯ ಕುರಿತು ಸುದೀರ್ಘವಾದ ಪ್ರಸ್ತಾವನೆಯಿದೆ. 'ಜನಪದ ಕಥೆಗಳು ಜನಪದ ಸಾಹಿತ್ಯದ ಪ್ರಾಚೀನವೂ, ಪ್ರಚಲಿತವೂ ಆದ ಒಂದು ವಿಶಿಷ್ಟ ಪ್ರಕಾರ, ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಹಾಗೂ ಪ್ರಾಚೀನ ಮಾನವನ ಬದುಕು, ಬಯಕೆ, ಆಸೆ,

ನಿರಾಸೆ, ಆಕಾಂಕ್ಷೆ, ನಂಬಿಕೆ, ಸಂಪ್ರದಾಯ ಆಚರಣೆ, ನೋವು-ನಲಿವು, ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಕಾಮ, ಕನಸು ಇತ್ಯಾದಿ ಮಾನವ ಗುಣಾವಗುಣಗಳನ್ನು ಹೊತ್ತು ಬಂದ ಒಂದು ಅಪೂರ್ವ ಸಾಹಿತ್ಯ ಪ್ರಕಾರ' ಎಂಬುದಾಗಿ ಜನಪದ ಕಥೆಗಳ ಮಹತ್ವವನ್ನು ವಿವರಿಸಿದ್ದಾರೆ. ವೈಜ್ಞಾನಿಕವಾಗಿ ಸಂಗ್ರಹಿಸಿ, ಸಂಪಾದಿಸಿ, ಅಧ್ಯಯನ ನಡೆಸಿ ಪ್ರಕಟಿಸಿರುವ ಏಕೈಕ ಜನಪದ ಕಥೆಗಳ ಈ ಸಂಕಲನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸಿದೆ. ೨೯ ಪುಟಗಳ ಸುದೀರ್ಘ ಪ್ರಸ್ತಾವನೆಯನ್ನು ಬರೆದಿರುವ ಡಿ.ಕೆ.ರಾಜೇಂದ್ರ ಅವರು ಅದರಲ್ಲಿರುವ ಪ್ರತಿಯೊಂದು ಜನಪದ ಕಥೆಗಳ ಸಾಹಿತ್ಯಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಸೂಕ್ಷ್ಮವಾಗಿ ಗುರುತಿಸಿ ವಿಶ್ಲೇಷಣೆಗೊಳಪಡಿಸಿದ್ದಾರೆ. ಸಂಗ್ರಹಿಸಿ, ಪ್ರಕಟಿಸಿರುವ ಇಲ್ಲಿಯ ಎಲ್ಲಾ ಕಥೆಗಳು ಪ್ರಾದೇಶಿಕವಾಗಿ ಮಹತ್ವ ಪಡೆದವುಗಳಾಗಿವೆ.

ಪ್ರೊ.ದೇಜಗೌ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ.ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ **'ದಕ್ಷಿಣ ಕರ್ನಾಟಕ ಜನಪದ ರಂಗಭೂಮಿ'**. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ೧೯೮೦ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿಯಲ್ಲಿ ಡಿ.ಕೆ.ರಾಜೇಂದ್ರ ಅವರು ಸಮಗ್ರ ಕರ್ನಾಟಕ ಜನಪದ ರಂಗಭೂಮಿಯನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. ಅದುವರೆವಿಗೂ ಯಾರೂ ದೃಷ್ಟಿ ಹರಿಸದೆ, ಮೂಲೆಗುಂಪಾಗಿದ್ದ ದಕ್ಷಿಣ ಕರ್ನಾಟಕದ ಮೂಡಲಪಾಯ ಯಕ್ಷಗಾನ ಬಯಲಾಟವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸಿದ ವಿಚಾರವನ್ನು ಸ್ವತಃ ಲೇಖಕರೇ ಹೇಳಿಕೊಂಡಿದ್ದಾರೆ. ಇದರ ಜೊತೆಗೆ ಜನಪದ ರಂಗಭೂಮಿಯ ಪ್ರಮುಖ ಪ್ರಕಾರಗಳಾದ ಸೂತ್ರದ ಗೊಂಬೆಯಾಟ ಹಾಗೂ ತೊಗಲುಗೊಂಬೆಯಾಟಗಳ ತಂತ್ರ, ಸ್ವರೂಪ, ಹಿನ್ನೆಲೆ, ಪ್ರಾದೇಶಿಕ ಭಿನ್ನತೆ ಮುಂತಾದವುಗಳನ್ನು ಪರಿಶೀಲಿಸಿದ್ದಾರೆ.

ಈ ಕೃತಿಯಲ್ಲಿ ಜನಪದ ನಾಟಕಗಳ ಮೂಲ, ಮೂಡಲಪಾಯ, ಯಕ್ಷಗಾನ, ಬಯಲಾಟ, ಗೊಂಬೆಯಾಟಗಳು, ಉಪಸಂಹಾರ, ಅನುಬಂಧಗಳೆಂದು ಐದು ಭಾಗಗಳಾಗಿ ವಿಂಗಡಿಸಿಕೊಂಡು ವ್ಯಾಪಕವಾದ ಕ್ಷೇತ್ರಕಾರ್ಯ ನಡೆಸಿ ಜನಪದ ಸಂಶೋಧನಾ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸರಳ ಸಜ್ಜನಿಕೆಯ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಡಿ.ಕೆ. ರಾಜೇಂದ್ರ ಅವರ ಆಳವಾದ ಅಧ್ಯಯನ, ಸಮತೋಲನ ಚಿಂತನ ಮತ್ತು ಜನಮುಖಿ ಬದ್ಧತೆಗಳಿಂದ ಕೂಡಿದ ಒಳನೋಟಗಳನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ. ಜನಪದ ರಂಗಭೂಮಿಯ ಸಮಗ್ರ ಪರಿಚಯ ಈ ಕೃತಿಯಲ್ಲಿರುವುದರಿಂದ, ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಮಾಡುವವರಿಗೆ ಆಕರ ಗ್ರಂಥವೂ ಆಗಿದೆ.

ಪ್ರೊ.ಡಿ.ಕೆ.ರಾಜೇಂದ್ರ ಅವರು ಶ್ರೇಷ್ಠ ಜಾನಪದ ವಿದ್ವಾಂಸರು ಮಾತ್ರವಲ್ಲ. ಅವರೊಬ್ಬ ಸೃಜನಶೀಲ ಲೇಖಕರಾಗಿ ಸತ್ವಯುತವಾದ ಹಲವು ಪ್ರಬಂಧ ಸಂಕಲನಗಳ ಜೊತೆಗೆ ಗ್ರಂಥ ಸಂಪಾದನೆ, ಮಕ್ಕಳ ಪುಸ್ತಕಗಳು, ಸಾಹಿತ್ಯ ವಿಮರ್ಶೆ, ಜೀವನ ಚಿತ್ರಗಳು – ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ.

ಪ್ರಬಂಧ ಸಂಕಲನಗಳು:

೧. ಮಾತಿನ ಮಲ್ಲರು

೨. ದೇವಗಂಗೆ

೩. ಘಟನೆಗಳು

೪. ನಸುನಗೆಯ ಅಲೆಗಳು

೫. ನಿಜಸಲ್ಲಾಪ

ಗ್ರಂಥ ಸಂಪಾದನೆ:

೧. ಪರೋಪಕಾರಿ

೨. ಅಮೃತವರ್ಷ

೩. ಕಾವ್ಯಗಂಗೋತ್ರಿ

೪. ಕಾವ್ಯ ಸಂಗಮ

೫. ಸಾಹಿತ್ಯಸಂಚಯ

೬. ಕುವೆಂಪು ಸಾಹಿತ್ಯಾವಲೋಕನ

೭. ಟಿ. ಮರಿಯಪ್ಪನವರು

೮. ನುಗ್ಗೇಹಳ್ಳಿ ಗುಜ್ಜೇಗೌಡರು

ಮಕ್ಕಳ ಪುಸ್ತಕಗಳು

೧. ಕರ್ನಾಟಕದ ಗೊಂಬೆ ಆಟಗಳು

೨. ಮೈಲಾರಲಿಂಗ

೩. ಮೂಡಲಪಾಯ

೪. ಯಕ್ಷಗಾನ ಬಯಲಾಟ

ಸಾಹಿತ್ಯ ವಿಮರ್ಶೆ

೧. ಅನುಶೀಲನ

೨. ಒಳನೋಟ

೩. ಸಾಹಿತ್ಯಸಂಚಯ

೪. ಕುವೆಂಪು ಸಾಹಿತ್ಯಾವಲೋಕನ

ಹೀಗೆ ಶಿಷ್ಟ ಮತ್ತು ಜಾನಪದ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿ ಮಾಡುವುದರ ಮೂಲಕ ಆಧುನಿಕ ಕನ್ನಡ ಸಾಹಿತ್ಯ ಕಂಡ ಅಪರೂಪದ ವಿದ್ವಾಂಸರೆನಿಸಿದ್ದಾರೆ.

ಡಾ.ಡಿ.ಕೆ.ರಾಜೇಂದ್ರ ಅವರದು ವಿಶಿಷ್ಟ ವ್ಯಕ್ತಿತ್ವ. ಸೌಮ್ಯ ಸ್ವಭಾವ, ಮೃದು ಮಾತು. ಸಜ್ಜನಿಕೆಗೆ ಮತ್ತೊಂದು ಹೆಸರು ಎನ್ನಲು ಅಡ್ಡಿಯಿಲ್ಲ. ಎಲೆ ಮರೆಯ ಕಾಯಿಯಂತೆ ಇದ್ದುಕೊಂಡೇ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸುವ ಕಾರ್ಯಪಾಲಕರು. ಕಪಟವರಿಯದ ಅವರ ವ್ಯಕ್ತಿತ್ವ ಅಪರೂಪದ್ದೆಂದೇ ಹೇಳಬಹುದು. ಹಿರಿಯರನ್ನು ಗೌರವಿಸುವಂತೆಯೇ ಕಿರಿಯರನ್ನು ಪ್ರೀತಿಯಿಂದ ಕಾಣುವ ಅವರ ಗುಣ ವಿಶೇಷವಾದದ್ದು. ಸರಳತೆ ಅವರ ವ್ಯಕ್ತಿತ್ವದ ಮತ್ತೊಂದು ಗುಣ. ಯಾರನ್ನೇ ಆದರೂ ನಗುಮುಖದಿಂದಲೇ ಬರಮಾಡಿಕೊಳ್ಳುವ ಅವರ ಸೌಜನ್ಯ ಅನುಕರಣೀಯವಾದದ್ದು. ಇದರಿಂದಾಗಿ ನಾಡಿನ ಗುರು ಹಿರಿಯರು, ಸ್ನೇಹಿತರು, ಸಹೋದ್ಯೋಗಿಗಳು ಮತ್ತು ಅಪಾರ ಶಿಷ್ಯಂದಿರ ಪ್ರೀತಿ ವಾತ್ಸಲ್ಯ ಗೌರವಗಳಿಗೆ ಪಾತ್ರರಾಗಿದ್ದಾರೆ.

ಸರಳ, ಸಜ್ಜನಿಕೆಗೆ ಹೆಸರಾದ ಡಿ.ಕೆ.ರಾಜೇಂದ್ರ ಅವರು ಸದಾ ಅಧ್ಯಯನ, ಅಧ್ಯಾಪನ ಮತ್ತು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಮೆಲುಮಾತಿನ ರಾಜೇಂದ್ರ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸುದೀರ್ಘ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿರ್ದೇಶಕರಾಗಿ ನಿವೃತ್ತಿ ಹೊಂದಿದರು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಡಿ.ಕೆ.ಆರ್.ಅವರ ಜಾನಪದ ಕೊಡುಗೆ ಅನನ್ಯವಾದುದು. ಜಾನಪದ ಅಧ್ಯಯನಕ್ಕೆ ವೈಚಾರಿಕ ಆಯಾಮವನ್ನು ತಂದುಕೊಟ್ಟ ರಾಜೇಂದ್ರ ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಜಾನಪದ ತಜ್ಞರಲ್ಲಿ ಒಬ್ಬರಾಗಿದ್ದಾರೆ.

–ಡಾ.ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು–೫೬೦೦೫೪